PAPERS LAID ON THE TABLE

Sri RAMAKRISHNA HEGDE (Minister for Development, Panchayat Raj and Co-operation).—Sir, I lay Notification No. DPC 122 LS 61, dated 17th October 1963 (taking power to exercise control over the business of the M/s. Dharwar District Co-operative Oilseeds Processing Society, Ltd., Gadag, District Dharwar) as required under section 130 of the Mysore Co-operative Societies Act, 1959.

Member's Representation.

Sri K. S. SURYANARAYANA RAO.—Sir, with your permission I want to say something. The point is Rule 2?3 and nothing else. It says, you can make a personal explanation though there is no question before the Assembly. So, even though the Speaker does not know what is in the mind of the Member, even then it is permissible. But; here the person against whom the allegation is made has subjected himself to supply a copy to the Speaker.

Mr. SPEAKER.—Will he kindly read, not now but later when he is free and when his mind is very receptive, the entire rule ?

Sri K. S. SURYANARAYANA RAO.—In this particular case, there is no provision. The Speaker may take any action that he deems fit.

Mr. SPEAKER.—Perhaps, I have not made myself clear. Now, let the Hon'ble Member remember this much. The statement that is mentioned is with regard the allegations made by one Member against another. Now, this member against whom certain allegations have been made is going to make a statement, if that statement compares allegations against the other, what should be done? So, I said, 'I want a copy of the statement'. If the statement that is going to be made by Sri Kadidal Manjappa contains anything against the member Sri Linge Gowda then ?

[MR. DEPUTY SPEAKER in the Chair.]

BUDGET ESTIMATES FOR 1964-65—DEMANDS FOR GRANTS

Demands Nos. 31, 32, 43, 48 and 50

(Debate continued)

ಶ್ರೀ ವೀರೇಂದ್ರ ಪಾಟೀಲ್ (ಲೋಕೋಪಯೋಗಿ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕಳೆದ ಎರಡು ದಿವಸಗಳಿಂದ ಪಿ. ಡಬ್ಲ್ಯು. ಡಿ. ಬಡ್ಜೆಟ್ ಡಿಮ್ಯಾಂಡ ಮೇಲೆ ಈ ಮಾನ್ಯ ಸಭೆಯಲ್ಲಿ ವಿಪುಲವಾದ ಚರ್ಚೆಯಾಗಿದೆ. ಅನೇಕ ಮಾನ್ಯ ಸದಸ್ಯರು ಈ ಬಡ್ಜೆಟ್ ಮೇಲೆ ಮಾತನಾಡುತ್ತಾ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಈ ರೀತಿ ಸಲಹೆ ಕೊಡುವಾಗ್ಗೆ ಕೆಲವರು ಟೀಕೆ ಸಹ ಮಾಡಿದ್ದಾರೆ. ಕೆಲವು ಮಾನ್ಯ ಸದಸ್ಯರು ಒಂದು ಗಮನಾರ್ಹವಾದ ವಿಷಯವನ್ನು ಹೇಳಿದರು. ಅದೇನೆಂದರೆ ಈಗ ಇರುವ ಮೈಸೂರು ರಾಜ್ಯವನ್ನು ಇಬ್ಭಾಗ ಮಾಡಿ ಎರಡು ರಾಜ್ಯಗಳನ್ನು ರಚನೆ

(ಶ್ರೀ ವೀರೇಂದ್ರ ಪಾಟೀಲ್)

ಮಾಡಬೇಕು ಎಂದು ಹೇಳುವವರೆಗೆ ಹೋಗಿದ್ದಾರೆ. ಅವರೆಲ್ಲರಿಗೂ ನಾನು ಅಭಿವಂದನೆಗಳನ್ನು ಸಲ್ಲಿಸುತ್ತೇನೆ. ಅವರ ಮನಸ್ಸಿನಲ್ಲಿರುವ ವ್ಯಥೆಯನ್ನು ಹೊರಗೆ ವ್ಯಕ್ತಪಡಿಸಿ ತೋರಿಸಿದ್ದಾರೆ. ಸಂಶಯ ವ್ಯಕ್ತಪಡಿಸಿದ್ದಾರೆ. ಈ ಸಂಶಯ ನಿವಾರಣೆ ಮಾಡುವುದಕ್ಕೆ ಒಂದು ಅವಕಾಶವನ್ನು ಸರಕಾರಕ್ಕೆ ಕಲ್ಪಿಸಿಕೊಟ್ಟಿದ್ದಾರೆ. ಅದರ ಸಲುವಾಗಿ ಅವರಿಗೂ ಅಭಿವಂದಿಸುತ್ತೇನೆ. ಈ ಸಭೆಯ ಎಲ್ಲ ಸದಸ್ಯರಿಗೂ ಟೀಕೆ ಮಾಡತಕ್ಕ ಅಧಿಕಾರ ಇದೆ. ಟೀಕೆ ಮಾಡುವಾಗ ರಚನಾತ್ಮಕ ಟೀಕೆ ಮಾಡಿದ್ದರೆ ಅದಕ್ಕೆ ಸಾಕಷ್ಟು ಗಮನ ಕೊಟ್ಟು ಅವರು ಹೇಳಿದ ಸಲಹೆಗಳಂತೆ ಎಷ್ಟರ ಮಟ್ಟಿಗೆ ಅವುಗಳನ್ನು ಕಾರ್ಯಾಚರಣೆಯಲ್ಲಿ ತರಲು ಸಾಧ್ಯವಿದೆ ಎನ್ನತಕ್ಕಂಥಾದ್ದನ್ನು ನೋಡುತ್ತಿದ್ದೇವೆ. ಟೀಕೆ ಬರೀ ಟೀಕೆಗೋಸ್ಕರ ಮಾಡಿದರೆ ಬಹುಶಃ ಅಂಥ ಟೀಕೆ ಸರಕಾರ ಹೆಚ್ಚು ಬೆಲೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಈ ಸಂದರ್ಭದಲ್ಲಿ ಸ್ಪಷ್ಟಪಡಿಸುತ್ತೇನೆ.

ಈ ಬಡ್ಜೆಟ್ ಮೇಲೆ ಮಾತನಾಡುತ್ತಾ ಕೆಲವು ಮಾನ್ಯ ಸದಸ್ಯರು ಅದರಲ್ಲಿಯೂ ಶ್ರೀ ಎಚ್. ಡಿ. ದೇವೇಗೌಡರು ಕೆಲವು ರಚನಾತ್ಮಕ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಹೇಳುವ ವಿಷಯಗಳನ್ನು ಕೇಳುವಾಗ್ಗೆ ಬಹಳ ಸಂತೋಷವಾಗುತ್ತಿತ್ತು. ಅವರಿಗೂ ಕೂಡ ಪಿ. ಡಬ್ಲ್ಯು. ಡಿ. ಕಂಟ್ರಾಕ್ಟರ್ ಆಗಿ ಕೆಲಸ ಮಾಡುವ ಒಂದು ಅವಕಾಶ ಸಿಕ್ಕಿತು. ಇದರಲ್ಲಿ ಏನೇನು ನ್ಯೂನತೆಗಳಿವೆ, ಕುಂದು ಕೊರತೆಗಳಿವೆ, ಅವುಗಳನ್ನು ಯಾವ ರೀತಿ ಸರಿಪಡಿಸಬೇಕು ಎಂಬುದು ಬಹುಶಃ ಅವರಿಗೆ ಚನ್ನಾಗಿ ಗೊತ್ತಿದೆ. ಅವರು ಕೊಟ್ಟಿರುವ ಕೆಲವು ಸಲಹೆಗಳಿಗೆ ತೀವ್ರ ಗಮನ ಕೊಡುತ್ತೇವೆ ಎಂದು ಈ ಸಂದರ್ಭದಲ್ಲಿ ಅವರಿಗೆ ನಾನು ಆಶ್ವಾಸನೆ ಕೊಡಲು ಬಯಸುತ್ತೇನೆ.

ಈಗ ಪಿ. ಡಬ್ಲ್ಯು. ಡಿ. ಖಾತೆ ಅಧಿಕಾರಿಗಳಲ್ಲಿ ಅದರಲ್ಲಿಯೂ ವಿಶೇಷವಾಗಿ ಹಳೇ ಮೈಸೂರು ಅಧಿಕಾರಿಗಳಲ್ಲಿ, ಅಪಾಯಿಂಟಮೆಂಟ್, ಪ್ರಮೋಷನ್; ಸೀನಿಯಾರಿಟಿ ಮುಂತಾದುವುಗಳ ಬಗ್ಗೆ ಒಂದು ತರಹದ ಅತೃಪ್ತಿಯುಂಟಾಗಿದೆ. ಹಳೇ ಮೈಸೂರು ಪ್ರದೇಶವನ್ನು ಕಡೆಗಣಿಸಲಾಗಿದೆ ಎಂಬ ವಿಚಾರವನ್ನು ಈ ಭಾಗದಲ್ಲಿಯ ಕೆಲವು ಜವಾಬ್ದಾರೀ ಸ್ಥಾನದಲ್ಲಿರುವ ಜನರು ಹೇಳುತ್ತಾ ಇದ್ದಾರೆ. ಅದೇ ರೀತಿಯಾಗಿ ಪತ್ರಿಕೆಗಳಲ್ಲಿ ಹೇಳಿಕೆ ಕೊಟ್ಟಿದ್ದಾರೆ. ಅದು ನನ್ನ ಗಮನಕ್ಕೆ ಸರಕಾರದ ಗಮನಕ್ಕೆ ಬಂದಿದೆ. ನಮ್ಮ ಗಮನ ಅತ್ತ ಸೆಳೆದಿದ್ದಾರೆ. ಅದನ್ನು ವಿಚಾರ ಮಾಡಬೇಕಾಗಿದೆ. ಈ ವಿಚಾರದ ಬಗ್ಗೆ ತೃಪ್ತಿಕರವಾಗಿ ಆಗುವ ಹಾಗೆ ಉತ್ತರ ಹೇಳಲು ಅಂಕಿ ಅಂಶಗಳನ್ನು ಸಂಗ್ರಹಿಸಿಕೊಂಡು ನಾನು ಸಿದ್ಧವಾಗಿ ಬಂದಿದ್ದೇನೆ. ಶ್ರೀಮಾನ್ ಮುಕ್ಕಣ್ಣಪ್ಪನವರು ಭಾಷಣ ಮಾಡಿದರು. ಅವರ ಭಾಷಣ ಕೇಳುವ ಕಾಲದಲ್ಲಿ ನನ್ನ ಮನಸ್ಸಿಗೆ ಬಹಳ ನೋವು ಉಂಟಾಯಿತು. ಈ ಪ್ರದೇಶದಲ್ಲಿ ಇಂಥ ಕೆಲಸವಾಗಿಲ್ಲ, ಇಂಥ ಪ್ರದೇಶದ ಕಡೆಗೆ ಗಮನ ಕೊಟ್ಟಿಲ್ಲ, ಇನ್ನೊಂದು ಕಡೆ ಹೆಚ್ಚು ಗಮನ ಕೊಟ್ಟಿದ್ದೀರಿ ಎಂಬುದಕ್ಕೆ ಅಂಕಿಅಂಶಗಳನ್ನು ಹೇಳಿದ್ದರೆ ಅದನ್ನು ಒಪ್ಪಿಕೊಳ್ಳಬಹುದಾಗಿತ್ತು. ಅವರು ಹೇಳಿರುವುದರಲ್ಲಿ ಸ್ವಲ್ಪಮಟ್ಟಿಗಾದರೂ ಸತ್ಯಾಂಶವಿಲ್ಲ. ಯಾವ ಆಧಾರವೂ ಇಲ್ಲದೆ, ಅಂಕಿಅಂಶಗಳಿಲ್ಲದೆ, ಹಳೇ ಮೈಸೂರಿಗೆ ಅನ್ಯಾಯ ಮಾಡುತ್ತಿದ್ದಾರೆ, ನಮಗೆ ಮನವರಿಕೆಯಾಗಿದೆ, ಸರಕಾರದಿಂದ, ಹಳೇ ಮೈಸೂರಿಗೆ ಯಾವರೀತಿಯಿಂದಲೂ ನ್ಯಾಯ ದೊರಕುತ್ತಿಲ್ಲ, ನಮ್ಮ ಹಳೇ ಮೈಸೂರು ಇದ್ದ ಹಾಗೆ ಇರಲಿ, ಹೊಸದಾಗಿ ಬಂದು ಸೇರಿದವರು ಹೊರಗೆ ಹೋಗಿ ಇನ್ನೊಂದು ಬೇರೆ ರಾಜ್ಯ ಮಾಡಿಕೊಳ್ಳಲಿ, ಎಂದು ಮುಂತಾಗಿ ಬಹಳ ಗಟ್ಟಿಯಾಗಿ ಹೇಳಿದರು. ಅದಕ್ಕೆ ಅಷ್ಟೇ ಗಟ್ಟಿಯಾಗಿ, ಜೋರಿನಿಂದ ಕನ್ನಡ ನಾಡು ಕಟ್ಟುವುದಕ್ಕೋಸ್ಕರ ಕರ್ನಾಟಕ ಏಕೀಕರಣದ ಚಳುವಳಿಯಲ್ಲಿ ಸಾಕಷ್ಟು ಶ್ರಮ ವಹಿಸಿ, ಕರ್ನಾಟಕ ಏಕೀಕರಣದಲ್ಲಿ ಅವರೂ ಒಬ್ಬರು ಭಾಗಿಗಳಾಗಿ ಈಗಲೂ ಸಹ ತಮ್ಮ ಸೇವೆ ಸಲ್ಲಿಸುತ್ತಿರುವ ಶ್ರೀಮಾನ್ ಅಂದಾನಪ್ಪ ದೊಡ್ಡಮೇಟಿಯವರು ಸಾಕಷ್ಟು ಉತ್ತರ ಕೊಟ್ಟಿದ್ದಾರೆ. ಅದು ಹಾಗೆ ಆಗುವ ಮೊದಲು ನನ್ನ ದೇಹ ಎರಡು ಭಾಗವಾಗಬೇಕು, ಕನ್ನಡ ನಾಡು ಎರಡು ಭಾಗವಾಗುವುದಕ್ಕೆ ನಾನು ಜೀವಂತ ಇರುವವರೆಗೆ ಅವಕಾಶ ಕೊಡುವುದಿಲ್ಲ ಎಂದು ಬಹಳ ಧೈರ್ಯದಿಂದ ಗಟ್ಟಿಯಾಗಿ ಸ್ಪಷ್ಟವಾಗಿ ಅವರು ಹೇಳಿದ್ದಾರೆ. ಅವರು ಹೇಳಿರುವುದಕ್ಕಿಂತ ಇನ್ನೂ ಹೆಚ್ಚು ಜೋರಾಗಿ ಹೇಳುವುದು ಸಾಧ್ಯವಿಲ್ಲ ಎಂದು ನನಗೆ ಅನಿಸುತ್ತದೆ. ಈ ಮಾತು ಇನ್ನೂ ಹೆಚ್ಚು ಬೆಳೆಸುವುದಕ್ಕೆ ಹೋಗುವುದಿಲ್ಲ. ಈ ಸಂದರ್ಭದಲ್ಲಿ ನನಗೆ ಒಂದು ರೀತಿಯಿಂದ ವ್ಯಥೆಯಾಯಿತು. ಪ್ರತಿಯೊಂದು ಸಂದರ್ಭದಲ್ಲಿಯೂ ಪ್ರತಿಯೊಂದು ಹೆಜ್ಜೆ ಹೆಜ್ಜೆಗೂ ಈ ಸಭೆಯಲ್ಲಿಯೇ ಆಗಲಿ, ಹೊರಗಡೆ ಆಗಲಿ, ಪತ್ರಿಕೆಗಳಲ್ಲಿಯಾಗಲಿ, ಕೆಲವರು ಜವಾಬ್ದಾರಿ ಸ್ಥಾನದಲ್ಲಿ ಇರತಕ್ಕಂಥವರು, ಒಂದು ರೀತಿ ಜವಾಬ್ದಾರಿ ಇದ್ದವರು, ಯಾವಾಗಲೂ ಹಳೇ ಮೈಸೂರಿಗೆ ಅನ್ಯಾಯವಾಗುತ್ತಿದೆ, ಹಳೇ ಮೈಸೂರನ್ನು ಕಡೆಗಣಿಸಲಾಗಿದೆ; ಎಂದು ಹೇಳುವುದನ್ನು ದಿನಾಲು ಈ ಸಭೆಯಲ್ಲಿ ಕೇಳುತ್ತಿದ್ದೇವೆ. ದೇಶದ ಹಿತದೃಷ್ಟಿಯಿಂದ ಸ್ವಲ್ಪಮಟ್ಟಿಗೆ ವಿಚಾರಮಾಡಬೇಕು. ಹಳೇ ಮೈಸೂರು, ಹೊಸ ಮೈಸೂರು, ಹೊರಗಿನಿಂದ ಬಂದವರು, ಎಂದು ವಿಚಾರ

ಇಟ್ಟುಕೊಂಡು ಸರಕಾರ ನಡೆಸಿಲ್ಲ. ಈ ಯೋಚನೆ ನನ್ನ ತಲೆಯಲ್ಲಿ ಬಂದಿರಲಿಲ್ಲ. ಹಳೇ ಮೈಸೂರಿಗೆ ನಿಜವಾಗಿಯೂ ಅನ್ಯಾಯವಾಗಿದೆಯೇ ಎಂಬುದನ್ನು ಕಂಡುಹಿಡಿಯಬೇಕೆಂಬ ಯೋಚನೆ ನನಗೆ ಬಂದಿತು. ಹಳೇ ಮೈಸೂರು ಮುಂಬಯಿ ಕರ್ನಾಟಕ, ಹೈದರಾಬಾದ ಕರ್ನಾಟಕ, ಕೊಡಗು, ಸೌಥ ಕೆನರ ಈ ಪ್ರದೇಶಗಳ ಬಗ್ಗೆ ಪ್ರತ್ಯೇಕವಾದ ಅಂಕಿಅಂಶಗಳನ್ನು ನಾನು ಇಟ್ಟುಕೊಂಡಿರಲಿಲ್ಲ. ಇದನ್ನು ಸರಕಾರ ಇಡುವುದು ಕೂಡ ಸರಿಯಲ್ಲ ಎಂದು ನನಗೆ ಅನ್ನಿಸುತ್ತದೆ. ಆದರೂ ಕೂಡ ಈ ವಿಚಾರ ಬಂದುದರಿಂದ ಅಂಕಿಅಂಶಗಳ ಶೇಖರಣೆ ಮಾಡಬೇಕಾಯಿತು. ಅವರ ವಾದವನ್ನು ಪ್ರತಿಭಟಿಸಿ ಅಂಕಿ ಅಂಶಗಳನ್ನು ತಮ್ಮ ಮುಂದೆ ಇಡುತ್ತೇನೆ. ಶ್ರೀಮಾನ್ ಮುಕಣ್ಣಪ್ಪನವರು ಯಾವ ಧಾಟಿಯಲ್ಲಿ ಭಾಷಣ ಮಾಡಿದ್ದಾರೆಯೋ, ಅದೇ ಧಾಟಿಯಲ್ಲಿ ಭಾಷಣ ಮಾಡಿ ಉತ್ತರ ಕೊಡಲು ನಾನು ಇಚ್ಛೆಪಡುತ್ತೇನೆ.

ಶ್ರೀ ಎಸ್. ಶಿವಪ್ಪ.—ಕಾಂಗ್ರೆಸ್ ಮಾಜಿ ಮಂತ್ರಿಗಳು ಹೇಳಿದ್ದಾರೆ.

ಶ್ರೀ ವೀರೇಂದ್ರ ಪಾಟೀಲ್.—ಇದನ್ನು ವಿರೋಧ ಪಕ್ಷದ ಸದಸ್ಯರಿಗೆ ಮಾತ್ರ ಹೇಳುತ್ತಿದ್ದೇನೆ. ನಮ್ಮ ಪಾರ್ಟಿಯಲ್ಲಿ ನಮ್ಮ ಪಕ್ಷದ ಸದಸ್ಯರೊಡನೆ ಚರ್ಚೆ ಮಾಡುವುದಕ್ಕೆ ಬೇಕಾದಷ್ಟು ಅವಕಾಶವಿರುತ್ತದೆ. ಸಮಾಧಾನ ಮಾಡುವುದು ಮುಖ್ಯವಾಗಿದೆ. ಯಾರಾದರೂ ಆಗಲಿ ಇವತ್ತಿನ ದಿವಸ ಒಂದುಗೂಡಿದಂಥ ಕನ್ನಡ ನಾಡನ್ನು ಒಡೆದು ಎರಡು ಭಾಗ ಮಾಡಬೇಕೆಂದು ಯಾವ ಭಾಷೆಯಲ್ಲಿ ಹೇಳಿದ್ದಾರೋ ಅದೇ ಭಾಷೆಯಲ್ಲಿ ಉತ್ತರ ಕೊಡಲು ಬಯಸುತ್ತೇನೆ. ಇದನ್ನು ವಿಚಾರಮಾಡಬೇಕು ಎಂದು ಶ್ರೀ ಮುಕ್ಕಣ್ಣಪ್ಪನವರು ಹೇಳಿದರು. ಹೊರಗೆ ಕೂಡ ಪತ್ರಿಕೆಗಳಲ್ಲಿ ಇದನ್ನು ಕೇಳುತ್ತಿದ್ದೇವೆ. ಬಹುಶಃ ಹಳೇ ಮೈಸೂರು ನಕಾಶೆ ಅಳಿಸಿಬಿಟ್ಟು ಬೆಂಗಳೂರು ರಾಜಧಾನಿಯನ್ನು ಹುಬ್ಬಳ್ಳಿಗೆ ತೆಗೆದುಕೊಂಡು ಹೋಗುವ ಪ್ರಯತ್ನ ಸರಕಾರ ಮಾಡುತ್ತಿದೆ ಎಂದು ಒಬ್ಬ ಮಾನ್ಯ ಸದಸ್ಯರು ಹೇಳಿದರು. ಹುಬ್ಬಳ್ಳಿಯಲ್ಲಿ ಮೂರು ಕೋಟಿ ರೂಪಾಯಿ ಖರ್ಚುಮಾಡಿ ಮೆಡಿಕಲ್ ಕಾಲೇಜು ಕಟ್ಟಿದ್ದಾರೆ ಎಂದು ನಿದರ್ಶನ ಕೊಟ್ಟರು. ಅವರು ಹೇಳುವ ರೀತಿಯಲ್ಲಿ ಒಂದು ಮೆಡಿಕಲ್ ಕಾಲೇಜ ಕಟ್ಟಿದ ಕಡೆಯಲ್ಲಿ ರಾಜಧಾನಿ ಹೋಗುತ್ತದೆ, ಎಂದರೆ ಅನೇಕ ಕಡೆ ವರ್ಷ ವರ್ಷಕ್ಕೂ ರಾಜಧಾನಿಯನ್ನು ಬದಲಿಸಬೇಕಾಗುತ್ತದೆ. ಇಂಥ ಭಾವನೆ ಅವರಿಗೆ ಏತಕ್ಕೆ ಬಂದಿತೋ ಅದನ್ನು ವಿಚಾರ ಮಾಡಲು ಅವರಿಗೇ ಬಿಡುತ್ತೇನೆ. ಮೂರು ಕೋಟಿ ರೂಪಾಯಿ ಖರ್ಚುಮಾಡಿ ಹುಬ್ಬಳ್ಳಿಯಲ್ಲಿ ಒಂದು ಮೆಡಿಕಲ್ ಕಾಲೇಜ ಮಾಡಿದ್ದಾರೆ. ಹಳೇ ಮೈಸೂರಿನ ಎಲ್ಲಾ ದುಡ್ಡು ಅಲ್ಲಿ ಹೇಗೆ ಖರ್ಚು ಮಾಡಿದಂತಾಗುತ್ತದೆ ? ಇದರ ಅರ್ಥವಾಗುವುದಿಲ್ಲ. ಇದಲ್ಲದೆ ಯಾವದೇ ಭಾಗದಲ್ಲಾಗಲಿ ಹಳೇ ಮೈಸೂರೇ ಆಗಲಿ, ಇಂಟೆಗ್ರೇಟೆಡ್ ಏರಿಯಾ ಆಗಲಿ, ಯಾವದಾದರೂ ಒಂದು ಕಾರ್ಯ ಪ್ರಾರಂಭ ಮಾಡಿರುವುದನ್ನು ಮುಂದುವರಿಸಬೇಕಾದುದು ಸರಕಾರದ ಕರ್ತವ್ಯವಾಗಿದೆ. ಎಲ್ಲಾ ದುಡ್ಡು ಇಂಟೆಗ್ರೇಟೆಡ್ ಏರಿಯಾಕ್ಕೆ ಸುರಿಯುತ್ತಿದ್ದಾರೆ ಎಂದು ಹೇಳುವುದಲ್ಲಿ ಏನಾದರೂ ಸತ್ಯಾಂಶವಿದೆಯೇ? ಈ ವಾದ ಸರಿಯೇ ? ಇದರ ಬಗ್ಗೆ ನಾನು ಈ ವಾದ ಬಂದ ಮೇಲೆ ಪರಿಶೀಲನೆ ಮಾಡಿದ್ದೇನೆ. ಕರ್ನಾಟಕ ಮೆಡಿಕಲ್ ಕಾಲೇಜ ಯಾವಾಗ ಸ್ಯಾಂಕ್ಷನ್ ಆಯಿತು ? ಯಾರು ಮಾಡಿದರು ? ಎಷ್ಟು ಖರ್ಚು ಆಗಿದೆ? ಇದರ ಬಗ್ಗೆ ಅಂಕಿಅಂಶಗಳನ್ನು ಕೊಟ್ಟು ಸ್ಪಷ್ಟಪಡಿಸುತ್ತೇನೆ. ಕರ್ನಾಟಕ ಮೆಡಿಕಲ್ ಕಾಲೇಜ ಅಡ್ಮಿಇಸ್ಟ್ರೇಟಿವ್ ಅಪ್ರೂವಲ್ ಬೊಂಬಾಯಿ ಸರಕಾರ 6—10—1956ರಲ್ಲಿ ಕೊಟ್ಟಿದೆ. ಇದಕ್ಕೆ ಒಟ್ಟು 204 ಲಕ್ಷ ರೂಪಾಯಿ ಖರ್ಚಾಗಿದೆ. ಅಡ್ಮಿನಿಸ್ಟ್ರೇಟೀವ್ ಅಪ್ರೂವಲ್ ಕೊಟ್ಟು ಆಗಿನ ಸರಕಾರ ಪ್ರಾರಂಭ ಮಾಡಿದ ಕೆಲಸವನ್ನು ಮುಂದುವರಿಸಿ ಮುಗಿಸಬೇಕಾದ ಕರ್ತವ್ಯ ಎಲ್ಲರದೂ ಆಗಿದೆ. ಇದು ಯಾವುದೇ ಭಾಗಕ್ಕೆ ಉಪಕಾರಮಾಡಿದಂತೆ ಅಲ್ಲ. ಯಾವುದೇ ಕೆಲಸ ಇರಲಿ ಅದನ್ನು ಪ್ರಾರಂಭಮಾಡಿದ್ದರೆ ಮುಗಿಸ ಬೇಕಾಗುತ್ತದೆ. ಅದೊಂದು ಕಮಿಟ್‌ಮೆಂಟ ಇರುತ್ತದೆ. ಇದೇ ಒಂದು ವಾದ ಹಿಡಕೊಂಡು ಹಳೇ ಮೈಸೂರಿಗೆ ಬಹಳ ಅನ್ಯಾಯವಾಗಿದೆ ಬಹಳ ಅನ್ಯಾಯ ಮಾಡುತ್ತಿದ್ದಾರೆ ಆದುದರಿಂದ ಮೈಸೂರು ರಾಜ್ಯವನ್ನು ಇಭ್ಭಾಗ ಮಾಡಿ ಎಂದು ವಾದ ಮಾಡುವುದು ಯಾವ ರೀತಿಯಿಂದಲೂ ಸರಿಯಲ್ಲ, ಉಚಿತವಲ್ಲ ಎಂದು ನನಗೆ ಅನಿಸುತ್ತದೆ. ಇದರಲ್ಲಿ ಯಾವ ಹುರುಳಿಲ್ಲ ಯಾವ ನೀತಿ ಇಲ್ಲ. ಆದುದರಿಂದ ಇವತ್ತಿನ ದಿವಸ ಎರಡು ರಾಜ್ಯಮಾಡುವುದು ಎಂದಿಗೂ ಸಾಧ್ಯವಿಲ್ಲ ಎಂದು ಶ್ರೀಮಾನ್ ದೊಡ್ಡಮೇಟಿಯವರು ಖಡಾಖಂಡಿತವಾಗಿ ಹೇಳಿದ್ದಾರೆ. ಇವತ್ತು ಇಂಥ ವಿಚಾರದ ಬಗ್ಗೆ ಈ ಸಭೆಯಲ್ಲಿ ಮಾತನಾಡುತ್ತಿದ್ದೀರಿ. ಒಂದು ಜವಾಬ್ದಾರೀ ಸ್ಥಾನದಿಂದ ಮಾತನಾಡುತ್ತಿದ್ದೀರಿ. ಈ ಅಸೆಂಬ್ಲಿ ಸದಸ್ಯರಾಗಿ ಬಂದವರು ನಾವೂ ನೀವೂ ಮಾತನಾಡುವುದನ್ನು ದೇಶದ 2 ಕೋಟಿ 35 ಲಕ್ಷ ಕನ್ನಡಿಗರು ಕೇಳುತ್ತಾರೆ, ಪತ್ರಿಕೆಗಳಲ್ಲಿ ಸಮಾಚಾರ ಓದುತ್ತಾರೆ. ಕೆಲವು ಸದಸ್ಯರು ಅಸೆಂಬ್ಲಿಯಲ್ಲಿ ಹಳೇ ಮೈಸೂರಿಗೆ ಬಹಳ ಅನ್ಯಾಯವಾಗಿದೆ ಎಂದು ಹೇಳಿದರು ಅಂದ ಬಳಿಕ ಬಹುಶಃ ಅದು ನಿಜವಿರಬಹುದೇ ಎಂದು ಹಳೇ ಮೈಸೂರಿನ ಒಂದು ಕೋಟಿ ಪ್ರಜಾ ಜನರು ವಿಚಾರಮಾಡುತ್ತಿರಬಹುದು, ಸರಕಾರ ನಮಗೆ ಏತಕ್ಕೆ ಅನ್ಯಾಯ ಮಾಡಿರಬಹುದು ? ಅನ್ಯಾಯ ಮಾಡುವುದಕ್ಕೆ ರಾಜ್ಯಕಟ್ಟಬೇಕಾಯಿತೆ ? ಎಂದು ಅವರು ವಿಚಾರಮಾಡ

(ಶ್ರೀ ವೀರೇಂದ್ರ ಪಾಟೀಲ್)

ಬಹುದು. ಏಕೀಕರಣ ಮಾಡಿದ್ದರಿಂದ ನಮಗೆ ಒಳ್ಳೆಯದಾಗಲಿಲ್ಲ ಎಂದು ಸಾರ್ವಜನಿಕರ ತಲೆಯಲ್ಲಿ ಅರ್ಥವಿಲ್ಲದ ಚಿಂತೆ ಹುಟ್ಟುವಂತೆ ನೀವು ಪ್ರಯತ್ನ ಮಾಡುತ್ತಿದ್ದೀರಿ. ಇದರಿಂದ ದೇಶದ ಐಕ್ಯ ಭಾವನೆಗೆ ಏನಾದರೂ ಸಾಧನವಾಗುತ್ತದೆಯೇ?

11-00 A.M.

ಇದು ದೇಶದ ಭಾವೈಕ್ಯತೆಗೆ ಸಾಧನೆಯಾದೀತೋ ಅಥವಾ ದೇಶಕ್ಕೆ ಇದರಿಂದ ಅನುಕೂಲ ವಾಗುತ್ತದೆಯೋ ಎನ್ನುವುದನ್ನು ವಿಚಾರಮಾಡಬೇಕು. ಇವತ್ತು ಉತ್ತರ ಗಡಿಯಲ್ಲಿ ಎರಡನೆ ದೇಶ ದವರು ನಮ್ಮ ದೇಶದಮೇಲೆ ಕೈಮಾಡಿದಮೇಲೆ ಇಡೀ ದೇಶದ 44—45 ಕೋಟಿ ಜನ ಒಂದಾಗಿ ನಾವೆಲ್ಲರೂ ಭಾರತೀಯರು ಎನ್ನುವ ವಾತಾವರಣ ಹುಟ್ಟಿದಾಗ ಈ ತರಹ ಕಲ್ಮಶ ವಾತಾವರಣ ಎಷ್ಟರಮಟ್ಟಿಗೆ ಸರಿಹೋದೀತು ಎನ್ನುವುದನ್ನು ವಿಚಾರಮಾಡಬೇಕು. ಯಾವಾಗಲೂ ಸತ್ಯವಾದ ವಿಷಯ ದೇಶದ ಮುಂದೆ ಹೋಗಬೇಕು. ನಾವೆಲ್ಲರೂ ಮುಂದೆ ಹೋಗುತ್ತೇವೆಯೇ ಹೊರತು ಹಿಂದೆ ಹೋಗುವುದಿಲ್ಲ. ಯಾವ ಶತ್ರು ಸಹ ನಮ್ಮನ್ನು ಹಿಂದಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಸಾಧ್ಯವಿಲ್ಲ. ಅದರ ಸಲುವಾಗಿ ಮಾನ್ಯ ಸದಸ್ಯರು ಪ್ರತಿಯೊಂದರಲ್ಲೂ ಹಳೆಯ ಮೈಸೂರು ರಾಗ ವನ್ನೇ ಆಡುವುದನ್ನು ನಿಲ್ಲಿಸಬೇಕು. ಇದರಿಂದರೇ ನಮ್ಮ ದೇಶದ ಅಭಿವೃದ್ಧಿಗೆ ಅವರೇ ಧಕ್ಕೆ ತರು ತ್ತಿದ್ದಾರೆ. ನಮ್ಮ ನಾಯಕರೇ ಕರ್ಣಾಟಕ ಏಕೀಕರಣವಾದಾಗ ಯಾವುದಾದರೂ ಭಾಷಾವಾರು ಪ್ರಾಂತ ರಚನೆಯಿಂದ ನಮ್ಮ ದೇಶದ ಭಾವೈಕ್ಯತೆಗೆ ಮತ್ತು ಯೂನಿಟಿಗೆ ಧಕ್ಕೆ ಬರುವುದಾದರೆ ಅಂತಹ ಭಾಷಾವಾರು ರಚನೆಯೇ ನಮಗೆ ಬೇಡವೆಂದು ಹೇಳಿದ್ದಾರೆ. ಆ ರೀತಿ ಹೇಳಿದ ಜನ ಇವತ್ತು ಬಹಳ ಜವಾಬ್ದಾರಿಯುತ ಸ್ಥಾನದಲ್ಲಿದ್ದಾರೆ. ಇವತ್ತು ನಾನು ಅದೇ ವಿಚಾರವನ್ನು ಇಟ್ಟು ಕೊಂಡಿದ್ದೇನೆ. ದೇಶದಲ್ಲಿರುವ ಐಕ್ಯತೆಗೆ ಯಾರೇ ಆಗಲೀ ಧಕ್ಕೆತರುವುದ ನಿಜವಾಗಿ ಸರಿಯಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಸರಕಾರದವರು ಮಾಡುತ್ತಿರುವ ಕೆಲಸ ನೋಡಿ ಹಾಗೆ ಆಗಿದೆಯೆಂದು ನನಗೆ ಕಾಣುತ್ತದೆ.

ಶ್ರೀ ವೀರೇಂದ್ರ ಪಾಟೀಲ್.—ಇನ್ನು ಕೆಲವು ಮಾನ್ಯ ಸದಸ್ಯರು ಸರ್ವಿಸ್ ವಿಚಾರವಾಗಿ ಹೇಳಿ ದ್ದಾರೆ. ಸರ್ವಿಸ್‌ನಲ್ಲಿ ಅಪಾಯಿಂಟ್‌ಮೆಂಟ್, ಪ್ರೊಮೋಷನ್, ಸೀನಿಯಾರಿಟಿಯಲ್ಲಿ ಹಳೆಯ ಮೈಸೂರಿಗೆ ಬಹಳವಾಗಿ ಅನ್ಯಾಯ ಮಾಡಿದ್ದಾರೆಂದು ಹೇಳಿದರು. ಆದರೆ ಈ ಸರಕಾರದವರು ಯಾವ ರೀತಿ ಅವರಿಗೆ ಅನ್ಯಾಯಮಾಡಿದ್ದಾರೆ ಎನ್ನುವುದನ್ನು ಪರಿಶೀಲನೆಮಾಡಿ ನೋಡೋಣ. ಪಿ. ಡಬ್ಲ್ಯೂ. ಡಿ. ಖಾತೆ ಬಹಳ ಮುಖ್ಯವಾದ ಖಾತೆ. ಅಲ್ಲಿ ಕೆಲಸಮಾಡುವ ಇಂಜನಿಯರುಗಳಿಗೆ ತಮ್ಮ ಪ್ರಾಸ್ಪೆಕ್ಟ್ ಬಗ್ಗೆ ಮತ್ತು ತಮ್ಮ ಫ್ಯೂಚರ್ ಬಗ್ಗೆ ತೃಪ್ತಿ ಇಲ್ಲದೇ ಹೋದರೆ ನಿಜವಾಗಿ ಕೆಲಸ ಕಾರ್ಯಗಳು ಚೆನ್ನಾಗಿ ನಡೆಯುವುದಿಲ್ಲ. ಅದರ ಸಲುವಾಗಿ ಯಾವ ಪ್ರದೇಶದರ್ಲಾಗಲೀ ಹೊಸ ಮೈಸೂರೇ ಆಗಲೀ ಅಥವಾ ಹಳೇ ಮೈಸೂರೇ ಆಗಲೀ ಯಾರಿಗೂ ಅನ್ಯಾಯವಾಗುತ್ತಿದೆನ್ನುವ ಅವಕಾಶವನ್ನು ಈ ಸರ್ಕಾರ ಕೊಡಬಾರದು ಎಂದು ಹೇಳಿದ್ದಾರೆ. ಈ ತರಹ ಅವಕಾಶವನ್ನು ನಾವು ಹಳೆಯ ಮೈಸೂರಿನವರಿಗೆ ಕೊಟ್ಟಿದ್ದೇವೋ ಇಲ್ಲವೋ ಎನ್ನುವುದು ಈಗಿರುವ ಪ್ರಶ್ನೆ. ವಿರೋಧ ಪಕ್ಷದ ನಾಯಕರು ನನ್ನನ್ನು ನೀವು ಪಿ. ಡಬ್ಲ್ಯೂ. ಡಿ. ಖಾತೆ ಬಿಟ್ಟುಕೊಡಿ, ಆಗ ಅವರ ಭಾವನೆಯೆಲ್ಲಾ ಸರಿಹೋಗುತ್ತದೆಂದು ಹೇಳಿದರು. ಇನ್ನು ಕೆಲವು ಮಾನ್ಯ ಸದಸ್ಯರು ಈ ಸ್ಟೇಟನ್ನು ಒಡೆದು ಎರಡು ಮಾಡಬೇಕೆಂದು ಮಾತನಾಡಿದ್ದಾರೆ. ಆದ್ದರಿಂದ ನಾನೂ ಸಹ ಅದೇ ದಾಟಿ ಯಲ್ಲಿಯೇ ಮಾತನಾಡುತ್ತೇನೆ. 1956 ರಿಂದ 1962ರ ವರೆಗೂ ಈ ಪಿ. ಡಬ್ಲ್ಯೂ. ಡಿ. ಖಾತೆ ಹಳೆಯ ಮೈಸೂರಿನ ಸದಸ್ಯರ ಅಧಿಕಾರದಲ್ಲಿಯೇ ಇತ್ತು.

Sri S. SIVAPPA.—On a Point of Order, Sir. Is the Hon'ble Minister for Public Works, in the way in which he is talking, wants to propagate this authority? By the way he is talking, he is only aggravating the feelings in the minds of the people of Mysore. Is it fair for the Hon'ble Minister to talk like that? This is very bad. I request the Chair to direct him not to talk in that way.

Mr. DEPUTY SPEAKER.—There is no Point of Order.

ಶ್ರೀ ವೀರೇಂದ್ರ ಪಾಟೀಲ್.—ವಿರೋಧ ಪಕ್ಷದ ನಾಯಕರು ಅವರ ಪಕ್ಷದ ಪರವಾಗಿ ಎಲ್ಲ ವನ್ನೂ ಹೇಳಿದ್ದಾರೆ. ಈ ಕಡೆಯಲ್ಲಿ ಆ ರೀತಿ ಮಾಡುವುದು ಸರಿಯಲ್ಲ. ವಿರೋಧಪಕ್ಷದ ನಾಯ ಕರು ಎಲ್ಲ ಪಕ್ಷಗಳಿಗೂ ಲೀಡರ್ ಆಗಿದ್ದಾರೆ.

Sri C. J. MUCKANNAPPA.—I represent only one party. But, the Hon'ble Minister wants to mix up matters.

Sri S. SIVAPPA.—I am not here to order anybody. I only appeal to the Members of this House including the Hon'ble Minister being a representative of the Government, not to go in the way as to create some sort of feeling in the minds of the people with regard to new Mysore and old Mysore.

Sri C. J. MUCKANNAPPA.—The Hon'ble Minister referred to the Leader of the Opposition and expressed that he is the Leader on this side. He is representing one section of the Opposition, *i.e.*, P.S.P. I am an independent man. I have got my own views.

ಶ್ರೀ ವೀರೇಂದ್ರ ಪಾಟೀಲ್.—ಈಗ ವಿರೋಧಪಕ್ಷದ ನಾಯಕರು ಹೇಳಿದಂಥ ಮಾತನ್ನು ನಾನು ಒಪ್ಪಿಕೊಂಡೆ. ನಾನು ಈ ದಾಟಿಯಲ್ಲಿ ಮಾತನಾಡಬೇಕೆಂದು ಇಲ್ಲ. ಆದರೆ ಅವರು ಬಹುಶಃ ವಿರೋಧಪಕ್ಷದ ಮಾನ್ಯ ಸದಸ್ಯರು ಮಾತನಾಡಿರುವ ಹಾಗೆ ನಾನು ಅವರಿಗೆ ಆ ಒಂದು ವಾತಾವರಣ ಹುಟ್ಟಿಸುವ ಹಾಗೆ ಮಾತನಾಡುತ್ತಿದ್ದೇನೆ. ಈಗ ಹಳೆಯ ಮೈಸೂರಿಗೆ ಅನ್ಯಾಯವಾಗುತ್ತಿದೆಂದು ಹೇಳುತ್ತಾರೆ. ಒಂದುವೇಳೆ ಅನ್ಯಾಯವಾಗುತ್ತಿದ್ದರೆ ನಮ್ಮ ಕಾನ್‌ಷನ್ಸ್ ಕಿಲ್ ಮಾಡುವುದಕ್ಕೆ ತಯಾರಾಗಿಲ್ಲ. ಎಲ್ಲೆಲ್ಲಿ ಅನ್ಯಾಯವಾಗುತ್ತಿದೆಂದು ಹೇಳುವಂಥ ಮಾರಲ್ ಕರೇಜ್ ನಮ್ಮಲ್ಲಿ ಬೇಕು. ಆದರೆ ಮಾನ್ಯ ಸದಸ್ಯರು ಯಾರೇ ಆಗಲೀ ಯಾವುದಾದರೂ ಒಂದು ಬೇಡಿಕೆಯ ಮೇಲೆ ಭಾಷಣ ಮಾಡಿದಾಗ ಅವರು ಹೇಳಿದ ಸಲಹೆಗಳಮೇಲೆ ಸಮಾಧಾನಕರವಾದ ಉತ್ತರ ಕೊಡಬೇಕಾದುದು ನನ್ನ ಕರ್ತವ್ಯ. ನಾನು ಮಾತ್ರ ಎರಡು ಮೈಸೂರು ಆಗಬೇಕೆಂದು ಹೇಳುವವನಲ್ಲ. ಆದರೆ ಇದರಲ್ಲಿ ಎಷ್ಟು ತಿರುಳಿದೆ, ಈ ತರಹ ಕಲ್ಮಶ ವಾತಾವರಣ ಕೆಲವು ಕ್ವಾರ್ಟರುಗಳಲ್ಲಿ ಹುಟ್ಟಿಸುವ ಕಾರಣವೇನೆಂದು ಹೇಳುತ್ತೇನೆ. ವಿರೋಧಪಕ್ಷದ ಮಾನ್ಯ ನಾಯಕರು ಪಿ. ಡಬ್ಲ್ಯು. ಡಿ. ಖಾತೆಯನ್ನು ಬಿಟ್ಟುಕೊಡಿ, ಎಲ್ಲಾ ಸರಿಹೋಗುತ್ತದೆ ಎಂದು ನನಗೆ ಹೇಳಿದರು. 1962ರಲ್ಲಿ ಪಿ. ಡಬ್ಲ್ಯು. ಡಿ. ಖಾತೆ ಕೊಡುವ ಮುಂಚೆ ನನ್ನನ್ನು ನಿಮಗೆ ಯಾವ ಖಾತೆ ಬೇಕು, ಯಾವ ಪೋರ್ಟ್‌ಫೋಲಿಯೊ ಇರಲಿ ಎಂಬುದಾಗಿ ನನ್ನನ್ನು ಕೇಳಿದ್ದೂ ಕೂಡ ಇಲ್ಲ. ನಾನೇನೂ ಯಾರನ್ನೂ ನನಗೆ ಪಿ. ಡಬ್ಲ್ಯು. ಡಿ. ಖಾತೆ ಬೇಕೆಂದು ಕೇಳಲೂ ಇಲ್ಲ. ನಾನು ಯಾರನ್ನೂ ಕೇಳದೆಯೇ ಈ ಪೋರ್ಟ್‌ಫೋಲಿಯೊ ನನಗೆ ಬಂತು. ಪ್ರತಿಯೊಬ್ಬರಿಗೂ ನ್ಯಾಯವಾಗಿ ರೂಲ್ಸ್ ಪ್ರಕಾರ ಆಡಳಿತ ನಡೆಸಿಕೊಂಡು ಹೋಗತಕ್ಕ ಜವಾಬ್ದಾರಿ ನನ್ನ ಮೇಲೆ ಬಿದ್ದಿದೆ. ಆರೀತಿ ಮಾಡದೆ ಹೋದರೆ ಖಂಡಿತ ಇದು ಸರಿಹೋಗುವುದಿಲ್ಲವೆಂದು ನಾನು ಹೇಳುತ್ತೇನೆ. ದೇಶದಲ್ಲಿ ಈ ತರಹ ವಾತಾವರಣವನ್ನು ಹುಟ್ಟಿಸುವುದಕ್ಕೆ ಅನೇಕ ಪ್ರಯತ್ನಗಳು ಈಗಾಗಲೇ ನಡೆಯುತ್ತಿವೆ. ಇದು ನಿಜವಾಗಿ ಸರಿಯಲ್ಲವೆಂಬುದನ್ನು ಕೆಲವು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು, ಏಕೆಂದರೆ ಎರಡು ಕೋಟಿ ಜನಗಳು ಈ ಸಭೆಯಲ್ಲಿ ಆಗುವ ನಡವಳಿಕೆಗಳನ್ನು ಪ್ರತಿದಿವಸವೂ ತಿಳಿದುಕೊಳ್ಳುತ್ತಿರುತ್ತಾರೆ. ಆದರೆ ವಿರೋಧಪಕ್ಷದ ನಾಯಕರು ನನ್ನ ಪೋರ್ಟ್‌ಫೋಲಿಯೊ ಕಿತ್ತು ಎರಡನೆಯವರ ಕೈಗೆ ಕೊಡಿ ಎಂದು ಹೇಳುವುದಕ್ಕೆ ಅವರಿಗೆ ಏನೂ ಅಧಿಕಾರವಿಲ್ಲ. ನನಗೆ ಕೊಟ್ಟಿರುವ ಖಾತೆ ಪಿ. ಡಬ್ಲ್ಯು. ಡಿ. ಆದರೆ ಇರ್ರಿಗೇಷನ್ ಮತ್ತು ಪವರ್ ಖಾತೆಗಳು ನನಗೇನೂ ಸಂಬಂಧವಿಲ್ಲ.

ಶ್ರೀಮಾನ್ ಮುಕ್ಕಣ್ಣಪ್ಪನವರು ಇಬ್ಬರು ಆಫೀಸರ್‌ಸ್‌ಗೆ ಅನ್ಯಾಯವಾಗಿ ಪ್ರಮೋಷನ್ ಕೊಟ್ಟಿದ್ದೀರಿ ಎಂದು ಹೇಳಿದರು. ಆ ಎರಡು ಬಗ್ಗೆ ಹೇಳಬೇಕಾದರೆ ಅದರಲ್ಲಿ ಒಬ್ಬರು ಆನರರಿ ಅಸಿಸ್ಟೆಂಟ್ ಇಂಜನಿಯರು, ಅವರನ್ನು ಎಕ್ಸಿಕ್ಯೂಟೀವ್ ಇಂಜನಿಯರಾಗಿ ಮಾಡಿದ್ದೀರಿ ಎಂಬ ಮಾತನ್ನು ಹೇಳಿದರು. ಅವರು ಬಹುಶಃ ಹಳೇ ಮೈಸೂರು ಇವಾಗಲೇ ಇದ್ದರು. ಕನ್ನಡ ರಾಜ್ಯ ಒಂದಾದ ಮೇಲೆ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಲಾಯಿತು. ಅದರ ಪ್ರಕಾರ ಈಕ್ವೇಷನ್ ಆಯಿತು. ಹಳೇ ಮೈಸೂರಿನಲ್ಲಿಯ ಆನರರಿ ಅಸಿಸ್ಟೆಂಟ್ ಇಂಜನಿಯರುಗಳು, ಅಸಿಸ್ಟೆಂಟ್ ಇಂಜನಿಯರುಗಳು ಎಂತಲೇ ಈಕ್ವೇಟ್ ಆಯಿತು. ಅದಾದ ಮೇಲೆ ನಮ್ಮಲ್ಲಿ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಜೂನಿಯರ್ ಇಂಜನಿಯರುಗಳು ಅಸಿಸ್ಟೆಂಟ್ ಇಂಜನಿಯರಾಗಬೇಕಾದರೆ 50 ಪರ್ಸೆಂಟ್ ಪ್ರಮೋಷನ ಕೊಡುತ್ತೇವೆ. 40 ಪರ್ಸೆಂಟ್ ಹೊಸದಾಗಿ ರಿಕ್ರೂಟ್ ಆಗುತ್ತಾರೆ, ಪಿ. ಎಸ್. ಸಿ. ಇಂದ ಇನ್ನುಳಿದ 10 ಪರ್ಸೆಂಟ್ ಜನರು ನಾನ್ ಗೆಜೆಟೆಡ್ ಓವರ್‌ಸೀಯರುಗಳು ಅಥವಾ ಸೂಪರ್‌ವೈಸರುಗಳಿಂದ ತೆಗೆದುಕೊಳ್ಳಲಾಗುತ್ತದೆ ಅದರ ಪ್ರಕಾರ ಅಸಿಸ್ಟೆಂಟ್ ಇಂಜನಿಯರು ಆಗಿದ್ದವರು ಎಕ್ಸಿಕ್ಯೂಟೀವ್ ಇಂಜನಿಯರು ಆಗಬೇಕಾದರೆ ಪ್ರಮೋಷನ್ ಮೂಲಕ ಆಗಬೇಕೇ ಹೊರತು ಅಲ್ಲಿ ರಿಸರ್ವೇಷನ್ ಇರಲಿಲ್ಲ. ಆದ್ದರಿಂದ ಅಸಿಸ್ಟೆಂಟ್ ಇಂಜ

(ಶ್ರೀ ವೀರೇಂದ್ರ ಪಾಟೀಲ್)

ನಿಯರನ್ನು ಪ್ರಮೋಟ್ ಮಾಡಬೇಕಾದರೆ ಸೀನಿಯಾರಿಟಿ ನೋಡಬೇಕಾಗುತ್ತದೆ, ಎಷ್ಟು ವರ್ಷ ಸರ್ವೀಸ್ ಮಾಡಿದ್ದಾರೆ ಎಂಬುದನ್ನು ನೋಡಿಕೊಂಡು ಸರ್ವೀಸ್ ಮೇಲೆ ಪ್ರಮೋಟ್ ಮಾಡುತ್ತಾರೆ, ಅಂತಹ ಸಂದರ್ಭದಲ್ಲಿ 12 ವರ್ಷ ಸರ್ವೀಸ್ ಆದವನನ್ನು ಬಿಟ್ಟು 10 ವರ್ಷ ಸರ್ವೀಸ್ ಆದವನಿಗೆ ಪ್ರಮೋಷನ್ ಕೊಡುತ್ತೇವೆ ಎಂದು ಹೇಳುವುದಕ್ಕಾಗುವುದಿಲ್ಲ. ಮೊದಲು ಅವನಿಗೆ ಕೊಟ್ಟು ಆಮೇಲೆ ಇವನಿಗೆ ಕೊಡಬೇಕಾಗುತ್ತದೆ. ಆನರೆರಿ ಅಸಿಸ್ಟೆಂಟ್ ಇಂಜನಿಯರ ಪ್ರಶ್ನೆ ಬಂತು, ಅವರಿಗೆ ಹೇಗೆ ಮಾಡುವುದು ಅಂತ. ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಅವರಿಗೆ ಪ್ರಮೋಷನ್ ಪ್ರಕಾರ ತೆಗೆದುಕೊಳ್ಳುವುದಕ್ಕೆ ಸಂಪೂರ್ಣ ಅಧಿಕಾರ ಇತ್ತು. ಪ್ರಮೋಷನ್ ಕೊಡುವ ಮುಂದೆ ಜೂನಿಯರ್ ಇಂಜನಿಯರು, ಅಸಿಸ್ಟೆಂಟ್ ಇಂಜನಿಯರು ಮತ್ತು ಎಕ್ಸಿಕ್ಯೂಟೀವ್ ಇಂಜನಿಯರು ಆಗುವವರೆಗೂ ಸೀನಿಯಾರಿಟಿ ಕಮ್ ಮೆರಿಟ್ ಮೇಲೆಯೇ ಹೋಗಬೇಕು. ಸೂಪರಿಂಟೆಂಡೆಂಟ್ ಇಂಜನಿಯರು ಮತ್ತು ಚೀಫ್ ಇಂಜನಿಯರು ಆಗಬೇಕಾದರೆ ಅದು ಸೆಲೆಕ್ಷನ್ ಪೋಸ್ಟ್ ಎಂದು ಇಟ್ಟುಕೊಂಡಿದ್ದೇವು. ಅದಕ್ಕೆ ಬರೀ ಸೀನಿಯಾರಿಟಿ ನೋಡುವುದಕ್ಕಾಗುವುದಿಲ್ಲ. ಎಬಿಲಿಟಿ ಇದೆಯೇ, ಮೆರಿಟ್ ಇದೆಯೇ ಎಂಬುದನ್ನು ನೋಡಿ ಮಾಡಬೇಕಾಗುತ್ತದೆ. ಈಗ ಅವರು ಯಾವ ಒಬ್ಬ ಅಧಿಕಾರಿಯ ಬಗ್ಗೆ ಹೇಳುತ್ತಾ ಇದ್ದಾರೆ ಅವರು ಅಸಿಸ್ಟೆಂಟ್ ಇಂಜನಿಯರು ಆಗಿದ್ದರು, ಅವರಿಗಿಂತ ಕಡಿಮೆ ಸರ್ವೀಸ್ ಮಾಡಿದವರಿಗೆ ಪ್ರಮೋಷನ್ ಕೊಟ್ಟರು ಎಂದು ಹೇಳಿ ಅವರು ಪ್ರೊಟೆಸ್ಟ್ ಮಾಡಿದರು. ಆಗ ಅದನ್ನು ಪರಿಶೀಲನೆ ಮಾಡಿದೆವು, ಲಾ ಡಿಪಾರ್ಟ್‌ಮೆಂಟನ್ನು ಕನ್‌ಸಲ್ಟ್ ಮಾಡಿದೆವು, ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಅಲ್ಲಿ ಎಕ್ಸಿಕ್ಯೂಟೀವ್ ಇಂಜನಿಯರು ಆಗ ಬೇಕಾಗಿದ್ದರೆ ಯಾವ ಕಂಡೀಷನ್ನೂ ಇಲ್ಲ, ಕ್ವಾಲಿಫಿಕೇಷನ್ ಇರಲಿ, ಇಲ್ಲದೇ ಹೋಗಲಿ, ಗ್ರಾಜುವೇಟ್ ಇರಲಿ, ನಾನ್-ಗ್ರಾಜುಯೇಟ್ ಇರಲಿ, ಸಮಾನವಾದ ಅಧಿಕಾರ ಇದೆ, ಎಂದು ಹೇಳಿ ಲಾ ಡಿಪಾರ್ಟ್‌ಮೆಂಟಿನ ಅಭಿಪ್ರಾಯ ಬಂತು. ಆಗ 100 ಪರ್ಸೆಂಟ್ ಇದ್ದುದನ್ನು ಮತ್ತೆ ಪರಿಶೀಲನೆ ಮಾಡಿ, ನಾನ್-ಗ್ರಾಜುಯೇಟ್, ಇರುವವರೆಲ್ಲರಿಗೂ ಕೊಡುವುದಕ್ಕಾಗುವುದಿಲ್ಲ ಎಂದು ಹೇಳಿ ಅದರಲ್ಲಿ 4 ಪರ್ಸೆಂಟ್ ಮಾತ್ರ ಕೊಡೋಣ ಎಂದು ಆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸನ್ನು ತಿದ್ದುಪಡಿ ಮಾಡಿದೆವು. To the disadvantage of the non-graduate engineers ಅವರಿಗೆ 4 ಪರ್ಸೆಂಟ್ ರಿಸರ್ವೇಷನ್ ಕೊಟ್ಟೆವು. ಯಾವ ರೀತಿ 10 ಪರ್ಸೆಂಟ್ ಸೂಪರ್‌ವೈಸರ್ಸ್ ನಾನ್‌ಗೆಜೆಟೆಡ್ ಸೂಪರ್‌ವೈಸರ್ಸ್ ಜೂನಿಯರ್ ಇಂಜನಿಯರು ಆಗುವುದಕ್ಕೆ ಅವಕಾಶವಿದೆಯೋ ಅದೇ ರೀತಿ ನಾನ್ ಗೆಜೆಟೆಡ್ ಅಸಿಸ್ಟೆಂಟ್ ಇಂಜನಿಯರುಗಳು ಎಕ್ಸಿಕ್ಯೂಟೀವ್ ಇಂಜನಿಯರುಗಳಾಗುವುದಕ್ಕೆ 4 ಪರ್ಸೆಂಟ್ ರಿಸರ್ವೇಷನ್ ಕೊಟ್ಟೆವು. ಮೊದಲಿನ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಅವರಿಗೆ 100 ಪರ್ಸೆಂಟ್ ಅಧಿಕಾರ ಇತ್ತು. ಲಾ ಡಿಪಾರ್ಟ್‌ಮೆಂಟಿನಿಂದ ಒಪೀನಿಯನ್ ಬಂದ ಮೇಲೆ ತಿದ್ದುಪಡಿಯಾದ ರೂಲ್ಸ್ ಪ್ರಕಾರ ಮೂರು ಜನರಿಗೆ ಪ್ರಮೋಷನ್ ಕೊಟ್ಟಿದ್ದಾರೆ, ಒಬ್ಬರು ಹಳೇ ಮೈಸೂರಿನವರು ಒಬ್ಬರು ಸೌತ್ ಕೆನರಾದವರು ಮತ್ತು ಇನ್ನೊಬ್ಬರು ಬೊಂಬಾಯ್ ಏರಿಯಾದಿಂದ ಬಂದವರು. ಒಂದು ತಿದ್ದುಪಡಿಯಾದ ರೂಲ್ಸ್ ಮಾಡಿದ ಮೇಲೆ ಯಾರ್ಯಾರಿಗೆ ಅದನ್ನು ಅನ್ವಯಿಸಬೇಕೋ ಆ ಪ್ರಕಾರ ಅನ್ವಯ ಮಾಡಿದ್ದೇವೆಂತೇ ಹೊರತು ಯಾರಿಗೂ ಉಪಕಾರ ಮಾಡುವ ಪ್ರಯತ್ನ ಮಾಡಿಲ್ಲ. ರೂಲ್ಸ್ ಪ್ರಕಾರ ಹೋಗುತ್ತಾ ಇದ್ದೇವೆ. ಬಹುಶಃ ಈಗ ಅವರಲ್ಲಿ 100 ಪರ್ಸೆಂಟ್ ಇತ್ತು, ಅದನ್ನು 4 ಪರ್ಸೆಂಟ್ ಮಾಡಿದಿರಿ ಎಂದು ಗ್ರೀವೆನ್ಸ್ ಇರಬೇಕೇ ಹೊರತು ಉಳಿದವರಿಗೆ ಯಾರಿಗೂ ಗ್ರೀವೆನ್ಸ್ ಇರಬಾರದು. ಎಂದು ಸ್ಪಷ್ಟವಾಗಿ ಹೇಳುತ್ತೇನೆ,

ಇನ್ನೊಂದು ಪ್ರಶ್ನೆ ಎಂದರೆ ಬೊಂಬಾಯ್ ಏರಿಯಾದಲ್ಲಿ ಗೆಜೆಟೆಡ್ ಇಂಜನಿಯರುಗಳು ಮತ್ತು ಡಿಪ್ಲೊಮೊ ಹೋಲ್ಡರುಗಳು ಯಾರ್ಯಾರು ಮೊದಲು ಸರ್ವೀಸ್‌ಗೆ ಜಾಯಿನ್ ಆಗಿದ್ದರು, ಓವರ್‌ಸೀಯರುಗಳು ಎಂದು ಜಾಯಿನ್ ಆಗಿದ್ದರು ಅವರ ವಿಷಯದಲ್ಲಿ ಒಂದು ಸಾರಿ ಕೆಲಸಕ್ಕೆ ಸೇರಿದ ಮೇಲೆ ಅವರ ಕ್ವಾಲಿಫಿಕೇಷನ್ ಏನು ಅಂತ ಸರಕಾರ ನೋಡುತ್ತಾ ಇರಲಿಲ್ಲ, ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಪ್ರಕಾರ ಯಾರು ಮೊದಲು ಜಾಯಿನ್ ಆಗಿ ಸೀನಿಯಾರಿಟಿ ಹೊಂದುತ್ತಾ ಇದ್ದರು. ಅವರು ಪ್ರಮೋಷನ್ ಪಡೆಯುತ್ತಾ ಇದ್ದರು. ಅಲ್ಲಿ ಇವತ್ತಿಗೂ ಅದೇ ಇರಬಹುದು ಎಂದು ಕಾಣುತ್ತದೆ. ನಾನ್-ಗ್ರಾಜುಯೇಟ್ ಇದ್ದವನು, ಓವರ್‌ಸೀಯರ್ ಇದ್ದವನು ಕೇವಲ 5 ವರ್ಷ ಸರ್ವೀಸ್ ಹಾಕಿದ್ದರೂ 4 ವರ್ಷ ಸರ್ವೀಸ್ ಹಾಕಿದಂತಹ ಗ್ರಾಜುಯೇಟ್ ಇಂಜನಿಯರಿಗಿಂತಲೂ ಮೇಲಿನ ಮಟ್ಟದಲ್ಲಿ ಇರುತ್ತಾ ಇದ್ದ. ಗ್ರಾಜುಯೇಟ್ ಇಂಜನಿಯರಿಗೆ ಪ್ರಮೋಷನ್ ಸಿಕ್ಕುತ್ತಾ ಇರಲಿಲ್ಲ. ಡಿಪ್ಲೊಮೊ ಹೋಲ್ಡರ್‌ಗೂ ಕೂಡ ಅಸಿಸ್ಟೆಂಟ್ ಇಂಜನಿಯರು ಆಗುವುದಕ್ಕೆ 100 ಪರ್ಸೆಂಟ್ ಆಪರ್ಚ್ಯೂನಿಟಿ ಇತ್ತು. ಈ ಸ್ಟೇಟ್‌ಗೆ ಬಂದಮೇಲೆ ಅದನ್ನು 10 ಪರ್ಸೆಂಟ್ ಮಾಡಿದ್ದೇವೆ. ಇದನ್ನೆಲ್ಲಾ ಹಿಂದಿನದು ಏನಿತ್ತು ಅದನ್ನು ತಿಳಿದುಕೊಳ್ಳುವುದಕ್ಕೆ ಹೇಳಿದೆ. ಆ ರೀತಿ ಒಂದು ನಿರ್ಧಾರ ತೆಗೆದುಕೊಂಡು ರೂಲ್ಸ್ ಮಾಡಿದ್ದೇವೆ.

ಯಾರೋ ಒಬ್ಬರು ಇಂಜನಿಯರು ಕೊಡಗಿನಿಂದ ಬಂದಿದ್ದಾರೆ ಎಂದು ಹೇಳಿ ಅವರ ವಿಷಯವನ್ನು ಹೇಳಿದರು. ಅವರು ಇವತ್ತು ಒಮ್ಮೆಗೆ ಮೇಲಕ್ಕೆ ಹೊರಟುಹೋಗಿದ್ದಾರೆ ಇನ್ನು ಕೆಲವು ದಿವಸದ ಮೇಲೆ ಸೂಪರಿಂಟೆಂಡಿಂಗ್ ಇಂಜನಿಯರು ಆಗುತ್ತಾರೆ ಎಂದು ಹೇಳಿದರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಆಗಲೇ ಮಾಡಿಬಿಟ್ಟಿದ್ದೀರಿ.

ಶ್ರೀ ವೀರೇಂದ್ರ ಪಾಟೀಲ್—ಅದು ನನಗೆ ಗೊತ್ತಿಲ್ಲ. ಅದರ ಬಗ್ಗೆ ಹೇಳುವುದಾದರೆ, ಯಾರೊಬ್ಬರು ಕೊಡಗಿನಿಂದ ಇಂಜನಿಯರು ಬಂದಿದ್ದಾರೆ ಅಲ್ಲಿ ಅವರು ಎಕ್ಸಿಕ್ಯೂಟೀವ್ ಇಂಜನಿಯರ್ ಇನ್‌ಚಾರ್ಜ ಆಫ್ ಮೈನರ್ ಇರಿಗೇಷನ್ ಎಂದು ಅಲ್ಲಿ ಕೆಲಸಮಾಡುತ್ತಿದ್ದರು. ಅವರು ಇಲ್ಲಿಗೆ ಬಂದ ಮೇಲೆ ಅವರನ್ನು ಯಾವ ರೀತಿ ಈಕ್ವೇಟ್ ಮಾಡಬೇಕೆಂಬ ಪ್ರಶ್ನೆ ಬಂದು, ಕೊಡಗು ಒಂದು ಸಣ್ಣ ಸ್ಟೇಟ್ ಆಗಿತ್ತು ಅಲ್ಲಿ ಎಕ್ಸಿಕ್ಯೂಟೀವ್ ಇಂಜನಿಯರು ಅದಮೇಲೆ ನಮಲ್ಲೂ ಅದೇ ರೀತಿ ಮಾಡಬೇಕೇ ಹೇಗೆ ಎಂಬ ಒಂದು ಪ್ರಶ್ನೆ ಉದ್ಭವವಾಯಿತು. ಅವರೂ ಕೂಡ ರೆಪ್ರಸೆಂಟೇಷನ್ ಕೊಟ್ಟರು. ಅದನ್ನು ಪರಿಶೀಲನೆ ಮಾಡಿ ಕೊನೆಗೆ 1960ರಲ್ಲಿ ಅವರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಒಂದು ತೀರ್ಮಾನವಾಯಿತು. ಅವರನ್ನು ಅಸಿಸ್ಟೆಂಟ್ ಇಂಜನಿಯರ ರ್‍ಯಾಂಕ್‌ನಲ್ಲಿ ಟಾಪ್‌ನಲ್ಲಿ ಇಟ್ಟು 1958 ರಿಂದ ಪ್ರಮೋಷನ್ ಕೊಡಬೇಕೆಂದು ಆಯಿತು, ಆ ಪ್ರಕಾರ ಪ್ರಮೋಷನ್ ಕೊಟ್ಟಿದ್ದಾರೆ. 1960 ರಲ್ಲಿ ಆದ ಕ್ಯಾಬಿನೆಟ್ ತೀರ್ಮಾನವನ್ನು ಇಂಪ್ಲಿಮೆಂಟ್ ಮಾಡಿದ್ದೇವೆಯೇ ಹೊರತು ಅದು ನಾನು ಮಾಡಿದ ನಿರ್ಣಯವೇನೂ ಅಲ್ಲ. ಬಹುಶಃ ಹಿಂದೆ ಮಾಡಿದ ನಿರ್ಣಯವನ್ನು ಇಂಪ್ಲಿಮೆಂಟ್ ಮಾಡಬಾರದಾಗಿತ್ತು ನಾನು, ಎಂಬುದು ತಮ್ಮ ಅಭಿಪ್ರಾಯವಾಗಿದ್ದರೆ ಅದು ಬೇರೆ ಮಾತು.

ಇನ್ನೊಂದು ಮಾತನ್ನು ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದರು ಅವರನ್ನು ಸೂಪರಿಂಟೆಂಡಿಂಗ್ ಇಂಜನಿಯರನ್ನಾಗಿ ಮಾಡಿಯೇ ಬಿಟ್ಟಿದ್ದೀರಿ ಎಂದು ಅವರು ಎಕ್ಸಿಕ್ಯೂಟೀವ್ ಇಂಜನಿಯರುಗಳಲ್ಲಿ ಟಾಪ್‌ನಲ್ಲಿ ಇದ್ದರೂ ಕೂಡ ಸರಕಾರದವರಿಗೆ ಅಧಿಕಾರ ಇದೆ ಸರಕಾರದವರು ಎಲ್ಲವನ್ನೂ ವಿಚಾರ ಮಾಡುತ್ತಾರೆ. ಅವರ ಆ ಸ್ಥಾನಕ್ಕೆ ಅರ್ಹರೇ? ಆ ಅಧಿಕಾರಕ್ಕೆ ಹೋದರೆ ಸರಿಯಾಗಿರುತ್ತದೆಯೇ? ಯೋಗ್ಯರೇ? ಅವರ ರಿಕಾರ್ಡ ಹೇಗಿದೆ? ಅವರ ಎಬಿಲಿಟಿ ಏನು? ಎಂಬುದನ್ನೆಲ್ಲಾ ಪರಿಶೀಲನೆ ಮಾಡಬೇಕಾಗುತ್ತದೆಯೇ ಹೊರತು ಬರೀ ಸೀನಿಯಾರಿಟಿಯೇ ಮುಖ್ಯವಲ್ಲ.

ನ್ಯಾಯವಾಗಿ ಯಾರಿಗೆ ಪ್ರಮೋಷನ್ ಸಿಕ್ಕಬೇಕೋ ಅವರಿಗೆ ಕೊಡುವುದನ್ನು ತಪ್ಪಿಸಲು ಈ ಸಭೆಯವರು ಏನೇ ಹೇಳಿದರೂ ಅದನ್ನು ಕೇಳಲು ತಯಾರಾಗಿಲ್ಲ. ನ್ಯಾಯವಾಗಿ ಹಕ್ಕಿರುವವರಿಗೆ ಕೊಟ್ಟೇ ಕೊಡುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಸಂಬಂಧದಲ್ಲಿ ರಿಟ್ ಪಿಟಿಷನ್ ಬಂದಿಲ್ಲವೆ?

ಶ್ರೀ ವೀರೇಂದ್ರ ಪಾಟೀಲ್.—ರಿಟ್ ಇದ್ದರೆ ಹೆಚ್ಚಿಗೆ ಮಾತನಾಡುವುದು ಬೇಡ. ಹೈಕೋರ್ಟ್ ತೀರ್ಮಾನ ನೋಡಿ ಮುಂದೇನು ಮಾಡಬೇಕೆಂಬುದನ್ನು ವಿಚಾರ ಮಾಡೋಣ. ಈ ಎರಡರ ಬಗ್ಗೆ ಯಾರು ಏನೇ ಹೇಳಿದರೂ ನಮ್ಮದು ಯಾವ ವಿಧವಾದ ಕೈವಾಡವೂ ಇಲ್ಲ, ಹಿಂದೆ ಮಾಡಿರುವ ನಿರ್ಣಯದ ಪ್ರಕಾರವೇ ಜಾರಿಗೆ ತರುತ್ತಿದ್ದೇವೆ, ಯಾರಿಗೂ ಫೇವರ್ ಮಾಡುವ ಪ್ರಯತ್ನ ಇಲ್ಲ. ಒಟ್ಟಿನಲ್ಲಿ ಎರಡು ಉದಾಹರಣೆಯೇನು ಹೇಳಿದರು ಅದಕ್ಕೆ ಈಗ ಉತ್ತರ ಹೇಳಿವೆ. ಆದರೆ ಹಳೆಯ ಮೈಸೂರಿನವರಿಗೆ ಅನ್ಯಾಯವಾಗಿದೆ, ಸರ್ವಿಸ್; ಪ್ರಮೋಷನ್, ಸೀನಿಯಾರಿಟಿ ಮತ್ತು ಅಪಾಯಿಂಟ್‌ಮೆಂಟ್‌ಗಳಲ್ಲಿ ಅನ್ಯಾಯವಾಗಿದೆ ಎಂದು ಹೇಳಿದರು. 1-11-56ಕ್ಕೆ ಮುಂಚೆ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಹಳೆಯ ಮೈಸೂರಿಗೆ ಸಂಬಂಧಪಟ್ಟಂತೆ ಇಬ್ಬರು ಚೀಫ್ ಎಂಜಿನಿಯರು, 11 ಜನ ಸೂಪರಿಂಟೆಂಡಿಂಗ್ ಎಂಜಿನಿಯರು, 62 ಎಗ್ಸಿಕ್ಯುಟಿವ್ ಎಂಜಿನಿಯರು, 248 ಅಸಿಸ್ಟೆಂಟ್ ಎಂಜಿನಿಯರು ಇದ್ದರು. ಹೊಸ ಮೈಸೂರಾದ ಮೇಲೆ ಈ ದಿವಸ ಎಷ್ಟಿದ್ದಾರೆಂದು ಹೇಳುತ್ತೇನೆ. ನಾನು ಹೇಳುವುದು ಬರೇ ಸಿವಿಲ್ ಮತ್ತು ಮೆಕ್ಯಾನಿಕಲ್ ಸ್ಟೇಡ್. ಈ ದಿವಸ 5 ಚೀಫ್ ಎಂಜಿನಿಯರು, 37 ಸೂಪರಿಂಟೆಂಡಿಂಗ್ ಎಂಜಿನಿಯರು, 149 ಎಗ್ಸಿಕ್ಯುಟಿವ್ ಎಂಜಿನಿಯರು, 716 ಅಸಿಸ್ಟೆಂಟ್ ಎಂಜಿನಿಯರು ಇದ್ದಾರೆ, ಇಲಾಖೆ ದೊಡ್ಡದಾಗಿದೆ, ದೇಶ ದೊಡ್ಡದಾಗಿದೆ, ಪ್ರಮೋಷನ್ ಕೊಡಲು ಇಂಟರ್‌ಸ್ಟೇಟ್ ಸೀನಿಯಾರಿಟಿ ಲಿಸ್ಟ್ ಫಾಲೋ ಮಾಡುತ್ತೇವೆ. 1957ರಲ್ಲಿ ಒಂದು ಲಿಸ್ಟ್ ಇತ್ತು, ನಂತರ 1960ರಲ್ಲಿ ಒಂದು ಪಟ್ಟಿ ಮಾಡಿದರು. ಫೈನಲ್ ಲಿಸ್ಟ್ ಪಬ್ಲಿಷ್ ಮಾಡಿದ ಮೇಲೆ ಹೈಕೋರ್ಟಿಗೆ ಹೋಗಿ ಕ್ವ್ಯಾಷ್ ಆಯಿತು. ಆದುದರಿಂದ 1960ನೆ ಇಸವಿಯ ಲಿಸ್ಟನ್ನು ಫಾಲೋ ಮಾಡುವುದಕ್ಕಾಗುವುದಿಲ್ಲ, ಪ್ರಮೋಷನ್ ಬಗ್ಗೆ 57ನೆ ಇಸವಿಯ ಲಿಸ್ಟನ್ನೇ ಫಾಲೋ ಮಾಡಬೇಕಾಗಿದೆ. ಈ ದಿವಸ ನನ್ನ ಖಾತೆಯಲ್ಲಿ ಹಿಂದಿದ್ದ ಮಂತ್ರಿಗಳು ಯಾವ ಪಟ್ಟಿಯನ್ನು ಫಾಲೋ ಮಾಡುತ್ತಿದ್ದರೋ ಅದನ್ನೇ ನಾನೂ ಫಾಲೋ ಮಾಡುತ್ತಿದ್ದೇನೆ. ಅದರ ಪ್ರಕಾರ ನಾನು ಬಂದಮೇಲೆ ಎಷ್ಟು ಪ್ರಮೋಷನ್ನುಗಳನ್ನು ಕೊಡಲಾಗಿದೆ ಎಂಬುವನ್ನು ಹೇಳುತ್ತೇನೆ. 14 ಎಗ್ಸಿಕ್ಯುಟಿವ್ ಎಂಜಿನಿಯರುಗಳಿಗೆ ಸೂಪರಿಂಟೆಂಡಿಂಗ್ ಎಂಜಿನಿಯರಾಗಿ ಪ್ರಮೋಷನ್ ಸಿಕ್ಕಿದೆ. ಅವರ ಪೈಕಿ ಹಳೇ ಮೈಸೂರಿನವರು 10 ಜನ ಇಂಟಿಗ್ರೇಟೆಡ್ ಏರಿಯಾದವರು 4 ಜನ ಇದ್ದಾರೆ.

(ಶ್ರೀ ವೀರೇಂದ್ರ ಪಾಟೀಲ್)

29 ಜನ ಅಸಿಸ್ಟೆಂಟ್ ಎಂಜಿನಿಯರುಗಳು ಎಗ್ಸಿಕ್ಯುಟಿವ್ ಎಂಜಿನಿಯರಾಗಿದ್ದಾರೆ. ಅದರಲ್ಲಿ 21 ಜನ ಹಳೇ ಮೈಸೂರಿನವರು, 8ಜನ ಇಂಟೆಗ್ರೇಟೆಡ್ ಏರಿಯಾದವರು. ಇದರಿಂದ ಯಾರಿಗೆ ಹೆಚ್ಚು ಪ್ರಮೋಷನ್ ಸಿಕ್ಕಿದೆ ಎಂಬುದನ್ನು ನೋಡಬಹುದು.

ಈ ಮಂತ್ರಿಗಳು ಬಂದ ಮೇಲೆ ಇಂಟೆಗ್ರೇಟೆಡ್ ಪ್ರದೇಶದವರಿಗೆಲ್ಲಾ ರೆಗ್ಯುಲರ್ ಡಿವಿಜನ್ ವಹಿಸಿದ್ದಾರೆ ಬೆಂಗಳೂರು ಮುಂತಾದ ಕಡೆಗೆ ಹಾಕಿದ್ದಾರೆ. ಹಳೇ ಮೈಸೂರಿನವರನ್ನು ಇನ್‌ವೆಸ್ಟಿಗೇಷನ್ ಡಿವಿಜನ್‌ಗೆ, ಯಾವುದೋ ಜಂಗಲಿಗೆ ಹಾಕಿದ್ದಾರೆ ಎಂದು ಒಬ್ಬಬ್ಬರು ಹೇಳಿದರು. ಅದನ್ನು ವಿಚಾರ ಮಾಡೋಣ. ಇನ್‌ವೆಸ್ಟಿಗೇಷನ್ ಸರ್ಕಲ್‌ನಲ್ಲಿ ಈಗ 3 ಜನ ಹಳೆಯ ಮೈಸೂರಿನವರು, ಇಬ್ಬರು ಇಂಟೆಗ್ರೇಟೆಡ್ ಏರಿಯಾದವರು ಇದ್ದಾರೆ. 21 ಜನ ಎಗ್ಸಿಕ್ಯುಟಿವ್ ಎಂಜಿನಿಯರುಗಳೇನು ಇನ್‌ವೆಸ್ಟಿಗೇಷನ್ ಸರ್ಕಲ್ಲಿನಲ್ಲಿದ್ದಾರೆ, ಅವರಲ್ಲಿ 13 ಮಂದಿ ಹಳೇ ಮೈಸೂರಿನವರು, 8 ಮಂದಿ ಇಂಟೆಗ್ರೇಟೆಡ್ ಏರಿಯಾದವರು ಇದ್ದಾರೆ. ಇದನ್ನು ನೋಡಿ ಹೆಚ್ಚು ಮಂದಿ ಹಳೇ ಮೈಸೂರಿನವರೇ ಇದ್ದಾರೆಂದು ಹೇಳಬಹುದು. ಅವರು ಇನ್‌ವೆಸ್ಟಿಗೇಷನ್ ಸರ್ಕಲ್ಲಿಗೆ ಹೋಗುವುದಕ್ಕೆ ಮುಂಚೆ ರೆಗ್ಯುಲರ್ ಡಿವಿಜನ್ನಿನಲ್ಲಿದ್ದು ನಂತರ ಇನ್‌ವೆಸ್ಟಿಗೇಷನ್ ಸರ್ಕಲ್ಲಿಗೆ ಹಾಕಲ್ಪಟ್ಟರೇ ಎಂಬುದನ್ನು ನೋಡಬಹುದು. 5 ಜನರಲ್ಲಿ ಹಳೇ ಮೈಸೂರಿನವರು 3 ಜನ ಇದ್ದಾರೆಂದೇನು ಹೇಳಿದೆ, ಅವರಲ್ಲಿ ಒಬ್ಬರು ನಾನು ಬರುವುದಕ್ಕೆ ಮೊದಲೇ ಇದ್ದರು; ಅವರು ಮೊದಲೇ ಇನ್‌ವೆಸ್ಟಿಗೇಷನ್ ಸರ್ಕಲ್ಲಿನಲ್ಲಿ ಕೆಲಸ ಮಾಡುತ್ತಿದ್ದರು. ಪ್ರಮೋಷನ್ ಸಿಕ್ಕಿದ ಮೇಲೆ ಒಬ್ಬರನ್ನು ಗುಲ್ಬರ್ಗಾಕ್ಕೆ ಮತ್ತೊಬ್ಬರನ್ನು ಧಾರವಾಡಕ್ಕೆ ಹಾಕಿದೆ; ಪ್ರಮೋಷನ್ ಬಂದಾಗ ಹಾಗೆ ಪೋಸ್ಟ್ ಮಾಡಬೇಕಾಯಿತು. ಅದೇ ರೀತಿಯಲ್ಲಿ 21 ಜನ ಅಸಿಸ್ಟೆಂಟ್ ಎಂಜಿನಿಯರುಗಳು ಎಗ್ಸಿಕ್ಯುಟಿವ್ ಎಂಜಿನಿಯರಾದಾಗ ಪ್ರಮೋಷನ್ ಆಗಿರುವ 13 ಜನರಲ್ಲಿ ಒಬ್ಬರನ್ನು ಬಿಟ್ಟು ಉಳಿದ 12 ಜನರನ್ನು ಇನ್‌ವೆಸ್ಟಿಗೇಷನ್ ಸರ್ಕಲಿಗೆ ಹಾಕಿದೆ. ಒಬ್ಬರನ್ನು ರೆಗ್ಯುಲರ್ ಡಿವಿಜನ್ನಿನಿಂದ ಇನ್‌ವೆಸ್ಟಿಗೇಷನ್ ಸರ್ಕಲ್ಲಿಗೆ ಹಾಕಿದೆ. ತುಮಕೂರು ಎಗ್ಸಿಕ್ಯುಟಿವ್ ಎಂಜಿನಿಯರು ತಮ್ಮ ಅನಾನುಕೂಲ ಹೇಳಿಕೊಂಡ ಮೇಲೆ, ಮೈಸೂರನ್ನೇ ಕೊಡಿ ಎಂದು ಹೇಳಿಕೊಂಡ ಮೇಲೆ, ಅವರ ಅನುಕೂಲಕ್ಕಾಗಿ ಅವರನ್ನು ತುಮಕೂರು ರೆಗ್ಯುಲರ್ ಡಿವಿಜನ್ನಿನಿಂದ ತುಮಕೂರಿನಿಂದ ವರ್ಗ ಮಾಡಿದೆ. ನಾನು ಬಂದ ಮೇಲೆ ರೆಗ್ಯುಲರ್ ಸರ್ಕಲ್ಲಿನಲ್ಲಿದ್ದ ಒಬ್ಬ ಸೂಪರಿಂಟೆಂಡಿಂಗ್ ಎಂಜಿನಿಯರನ್ನು ಇನ್‌ವೆಸ್ಟಿಗೇಷನ್ ಸರ್ಕಲ್ಲಿಗೆ ಹಾಕಲಾಗಿದೆ. ಅವರು ಹೈದರಾಬಾದು ಪ್ರದೇಶಕ್ಕೆ ಸೇರಿದವರು. ಅವರನ್ನು ಅಪ್ಪರ್ ಕೃಷ್ಣಾ ಇನ್‌ವೆಸ್ಟಿಗೇಷನ್ ಸರ್ಕಲಿಗೆ ಹಾಕಿದೆ. ಇದರಿಂದ ಎಷ್ಟು ಜನ ಹಳೇ ಮೈಸೂರಿನವರನ್ನು ಇನ್‌ವೆಸ್ಟಿಗೇಷನ್ ಸರ್ಕಲಿಗೆ ಹಾಕಿದೆ, ಹೊಸ ಮೈಸೂರಿನವರಲ್ಲಿ ಎಷ್ಟು ಜನರನ್ನು ಹಾಕಿದೆ ಎಂಬುದು ಅರ್ಥವಾಗುತ್ತದೆ. ಆದರೆ 21 ಜನ ಎಗ್ಸಿಕ್ಯುಟಿವ್ ಎಂಜಿನಿಯರುಗಳಾಗಿದ್ದಾರೆ, 10 ಜನ ಸೂಪರಿಂಟೆಂಡಿಂಗ್ ಎಂಜಿನಿಯರುಗಳಾಗಿದ್ದಾರೆ ಎಂದು ಹೇಳಿರುವುದರಲ್ಲಿ ಎಷ್ಟು ಜನರನ್ನು ಸೂಪರ್‌ಸೀಡ್ ಮಾಡಲಾಗಿದೆ ಎಂದು ಕೇಳಬಹುದು, ಆ ಶಂಕೆ ಬರಬಹುದು.

11-30 A.M.

ಇಲ್ಲಿ ಸೂಪರಿಂಟೆಂಡೆಂಟು ಇಂಜಿನೀಯರುಗಳ ಪೋಸ್ಟ್ ಸೆಲೆಕ್ಷನ್ಸ್ ಪೋಸ್ಟುಗಳು ಆಗಿದ್ದರೂ ಇದರಲ್ಲಿ ಸೀನಿಯಾರಿಟಿಯನ್ನು ಸೂಪರ್‌ಸೀಡ್ ಮಾಡಿ ನೇಮಕಗಳನ್ನು ಮಾಡುತ್ತಿದ್ದಾರೆಂದು ಕೆಲವರು ಹೇಳಬಹುದು. ಆದರೆ ನಾನು ತಿಳಿದುಕೊಂಡಿರುವ ಮಟ್ಟಿಗೆ ಸೀನಿಯಾರಿಟಿಗಳನ್ನು ಸೂಪರ್‌ಸೀಡ್ ಮಾಡಬಾರದು ಎಂದು ತಿಳಿದುಕೊಂಡಿದ್ದೇನೆ. ಸೂಪರಿಂಟೆಂಡೆಂಟ್ ಇಂಜನೀಯರಾಗಿ ಪ್ರಮೋಷನ್ನು ಮಾಡುವಾಗ ಎಕ್ಸಿಕ್ಯೂಟೀವ್ ಇಂಜನೀಯರುಗಳಿಗೆ ಸೂಪರ್‌ಸೀಡ್ ಎಷ್ಟಾಗಿದೆ ಎನ್ನುವುದನ್ನು ನೋಡಿದರೆ ಒಬ್ಬರು ಹಳೆಯ ಮೈಸೂರಿನ ಅಧಿಕಾರಿಗಳಿಗೆ ಮತ್ತು ಇನ್ನೊಬ್ಬರು ಹೈದರಾಬಾದು ಏರಿಯಾದಿಂದ ಬಂದ ಅಧಿಕಾರಿಗಳಿಗೆ ಸೂಪರ್‌ಸೀಡ್ ಮಾಡಬೇಕಾಯಿತು. ಏಕೆಂದರೆ ಈ ಅಧಿಕಾರಿಗಳ ಮೇಲೆ ಎನ್‌ಕ್ವೈರಿಗಳು ನಡೆಯುತ್ತಿವೆ. ಒಬ್ಬರು ಮೂರು ಲಕ್ಷ ರೂಪಾಯಿಗಳಷ್ಟು ಪ್ರಮಾಣದ ಡಿವಿಜನ್ನು ಸ್ಟೋರು ಚಾರ್ಜಿನಲ್ಲಿದ್ದವರು ಇದರ ಮೇಲೆ ಇವು ಸೆಲೆಕ್ಷನ್ನು ಪೋಸ್ಟುಗಳಾಗಿರುವುದರಿಂದ ಎನ್‌ಕ್ವೈರಿ ನಡೆಯುತ್ತಿರುವಾಗ ಪ್ರಮೋಷನ್ನನ್ನು ಕೊಡುವುದಕ್ಕಾಗುವುದಿಲ್ಲ ಎಂದು ಈ ಎರಡು ಕೇಸುಗಳಲ್ಲಿ ಮಾತ್ರ ಸೂಪರ್‌ಸೀಡು ಮಾಡಲಾಗಿದೆ. 1957ರಿಂದೀಚೆಗೆ ಎಕ್ಸಿಕ್ಯೂಟೀವ್ ಇಂಜನೀಯರಾಗಿ ಪ್ರಮೋಷನ್ನಿನ ಮೇಲೆ ಬರುವವರು ಅಸಿಸ್ಟೆಂಟು ಇಂಜಿನೀಯರುಗಳು. ಇದರಲ್ಲಿ ಮೂರು ಜನರನ್ನು ಸೀನಿಯಾರಿಟಿಯಲ್ಲಿ ಸೂಪರ್‌ಸೀಡ್ ಮಾಡಬೇಕಾಯಿತು ಅದರಲ್ಲಿ ಒಬ್ಬರು ಹಳೇ ಮೈಸೂರಿನ ಅಧಿಕಾರಿಗಳು ಮತ್ತು ಇನ್ನಿಬ್ಬರು ಇಂಟಿಗ್ರೇಟೆಡ್ ಏರಿಯಾಕ್ಕೆ ಸೇರಿದವರು. ಏಕೆಂದರೆ ಅವರ ಮೇಲೆ ನಡೆ

ಯುತ್ತಿರುವ ಎನ್‌ಕ್ವೈರಿಗಳು ಇನ್ನೂ ಇತ್ಯರ್ಥವಾಗಿಲ್ಲ. ಅಲ್ಲದೆ ಎನ್‌ಕ್ವೈರಿ ನಡೆಯುತ್ತಿರುವಾಗ ಅಂತಹ ಅಧಿಕಾರಿಗಳಿಗೆ ಪ್ರಮೋಷನ್ ಕೊಡುವುದು ನ್ಯಾಯವೂ ಅಲ್ಲ. ಅಲ್ಲದೆ ಎನ್‌ಕ್ವೈರಿಗಳ ಬಗ್ಗೆ ಯಾವ ವಿವರಗಳನ್ನೂ ಹೇಳಲು ಬಯಸುವುದಿಲ್ಲ.

ಇನ್ನು ನಮ್ಮಲ್ಲಿರುವ ಪರ್ಮನೆಂಟು ರೆಗ್ಯುಲರ್ ಡಿವಿಜನ್ನುಗಳಲ್ಲಿ 149 ಎಕ್ಸಿಕ್ಯೂಟೀವ್ ಇಂಜನಿಯರುಗಳಿದ್ದಾರೆ, ಇದರಲ್ಲಿ 39 ಜನ ಪರ್ಮನೆಂಟು ರೆಗ್ಯುಲರು ಡಿವಿಜನ್ನುಗಳಲ್ಲಿದ್ದಾರೆ. ಇದರಲ್ಲಿರುವ ಪ್ರಮಾಣ ಹೇಗಿದೆ ಎಂದರೆ ಹಳೆಯ ಮೈಸೂರಿನ ಭಾಗಕ್ಕೆ ಸೇರಿದವರು 25 ಜನ ಎಕ್ಸಿಕ್ಯೂಟೀವ್ ಇಂಜನೀಯರುಗಳು 13 ಜನ ಮತ್ತು ಎಗ್ಸಿಕ್ಯುಟಿವ್ ಎಂಜಿನಿಯರುಗಳು ಇಂಟೆಗ್ರೇಟೆಡ್ ಏರಿಯಾಕ್ಕೆ ಸೇರಿದವರು ಮತ್ತು ಇನ್ನು ಒಂದು ಸ್ಥಾನ ಹಾಗೇ ಖಾಲಿ ಇದೆ. ಇದರಿಂದ ರೆಗ್ಯುಲರು ಡಿವಿಜನ್ನುಗಳಲ್ಲಿ ಯಾವ ಯಾವ ಪ್ರಮಾಣದಲ್ಲಿ ನಮ್ಮ ಆಡಳಿತದ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ ಇದರಲ್ಲಿ ಹೊಸ ಮೈಸೂರು ಭಾಗದವರು ಮತ್ತು ಹಳೆಯ ಮೈಸೂರು ಭಾಗದವರು ಎಷ್ಟಿದ್ದಾರೆ ಎಂಬ ಒಂದು ವಿಹಂಗಮ ನೋಟವನ್ನು ತಮ್ಮ ಮುಂದೆ ಇಟ್ಟಿದ್ದೇನೆ.

ಇನ್ನೊಂದು ಮಾತನ್ನು ಈ ಸಂದರ್ಭದಲ್ಲಿ ತಮ್ಮ ಮುಂದೆ ಹೇಳಬಯಸುತ್ತೇನೆ. ಈಚೆಗೆ ನಮ್ಮ ಆಫೀಸರುಗಳ ಟೆಂಡೆನ್ಸಿ ಏನಾಗಿದೆ ಎಂದರೆ, ಎಲ್ಲರೂ ರೆಗ್ಯುಲರ್ ಡಿವಿಜನ್ನುಗಳಲ್ಲಿಯೇ ಕೆಲಸ ಮಾಡಲು ಬರಬೇಕು ಎನ್ನುತ್ತಾರೆ. ರೆಗ್ಯುಲರ್ ಡಿವಿಜನ್ನುಗಳಿಗೆ ಬರುವುದರಿಂದ ಬೇಕಾದಷ್ಟು ಅಡ್ವಾಂಟೇಜುಗಳ ಸಿಗುತ್ತವೆ, ಡಿಸ್ಟ್ರಿಕ್ಟು ಹೆಡ್ ಕ್ವಾರ್ಟರುಗಳು ಸಿಗುತ್ತವೆ ಇದರ ಮೇಲೆ ಎಲ್ಲ ಕಡೆಯಲ್ಲಿಯೂ ಇರುವ ಸಬ್ ಡಿವಿಜನ್ನುಗಳಲ್ಲಿ ಅಸಿಸ್ಟೆಂಟು ಇಂಜಿನಿಯರುಗಳಿರುತ್ತಾರೆ ಮತ್ತು ಎಲ್ಲ ಕೆಲಸಗಳನ್ನು ಅವರೇ ಮಾಡಿಕೊಂಡು ಹೋಗುತ್ತಿರುತ್ತಾರೆ ಮತ್ತು ಅವರ ವರ್ಕ್ ಕೂಡ ಲೈಟ್ ಆಗಿರುತ್ತದೆ, ಹೆಚ್ಚು ಕೆಲಸ ಮಾಡುತ್ತಿರುವ ಅಗತ್ಯವಿರುವುದಿಲ್ಲ ಮತ್ತು ಮಕ್ಕಳ ವಿದ್ಯಾಭ್ಯಾಸದ ಸೌಕರ್ಯ ಹಾಗೂ ಮತ್ತಿತರ ಸೌಕರ್ಯಗಳು ಸಿಗುತ್ತವೆ ಎಂದು ರೆಗ್ಯುಲರ್ ಡಿವಿಜನ್ನುಗಳಿಗೆ ಬರಬೇಕೆಂದು ಬೇಕಾದಷ್ಟು ಪ್ರಯತ್ನ ಮಾಡುತ್ತಾರೆ. ಆದರೆ ಇಲ್ಲಿ ನಮ್ಮ ಸರ್ವಿಸ್ಸುಗಳು ಮದರಾಸಿನಲ್ಲಿರುವಂತೆ, ಬೊಂಬಾಯಿಯಲ್ಲಿರುವಂತೆ, ಆಂಧ್ರದಲ್ಲಿರುವಂತ ಪಿ. ಡಬ್ಲ್ಯು. ಡಿ. ಬೈಫರ್‌ಕೇಟ್ ಆಗಿಲ್ಲ, ಅಲ್ಲೆಲ್ಲಾ ಬೈಫರ್‌ಕೇಟ್ ಮಾಡಿದ್ದಾರೆ. ಆದುದರಿಂದ ಆ ಪ್ರಾಂತಗಳಲ್ಲಿ ಇರಿಗೇಷನ್ನುಗಳ ಅಧಿಕಾರಿಗಳ ಕೇಡರೇ ಬೇರೆ, ಪವರ್ ಭಾಗದ ಕೇಡರುಗಳೇ ಬೇರೆ, ರೋಡುಗಳ ಹಾಗೂ ಹೈವೇಸ್‌ಗಳ ಕೇಡರೇ ಬೇರೆ ಇರುವುದರಿಂದ ಒಂದಕ್ಕೊಂದಕ್ಕೆ ಸಂಬಂಧವೇ ಇಲ್ಲ. ಆದರೆ ನಮ್ಮಲ್ಲಿರುವ ಪಿ. ಡಬ್ಲ್ಯು. ಡಿ. ಕೇಡರುಗಳು ಒಂದೇ ಕೇಡರಿನಲ್ಲಿವೆ. ಮೆಕಾನಿಕಲ್ ಇಂಜನೀಯರಾಗಿರುವವರು ಸಿವಿಲ್ ಇಂಜನೀಯರಾಗಿರಲೂ ಬರುತ್ತದೆ. ಇನ್‌ವೆಸ್ಟಿಗೇಷನ್ನು ಸರ್ಕಲ್‌ಗಳಲ್ಲವರು ಇರಿಗೇಷನ್ನು ಪ್ರಾಜೆಕ್ಟುಗಳಲ್ಲಿಯೂ ಬರಬಹುದು ಅಥವಾ ರೋಡುಗಳ ಮತ್ತು ಕಟ್ಟಡಗಳ ಇಂಜನೀಯರುಗಳಾಗಿಯೂ ಬರಬಹುದು, ಹೀಗೆ ಎಲ್ಲರೂ ಒಂದೇ ಕೇಡರಿನಲ್ಲಿರುತ್ತಾರೆ. ಕೆಲವು ಜನ ಪ್ರಾಜೆಕ್ಟುಗಳಲ್ಲಿ ಮತ್ತು ಇನ್‌ವೆಸ್ಟಿಗೇಟ್ ಸಬ್ ಡಿವಿಜನ್ನುಗಳಲ್ಲಿ ಹೋಗಿ ಕೆಲಸ ಮಾಡಬೇಕಾದರೆ ಅವರಿಗೆ ಜೀವನ ನಡೆಸುವುದು ಕಷ್ಟ ಎಂದು ತಿಳಿದುಕೊಂಡು ಹೋಗಲು ಇಷ್ಟಪಡುವುದಿಲ್ಲ. ಅಲ್ಲದೆ ಅವರುಗಳು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ ಮತ್ತು ಇನ್ನಿತರ ಕಾರಣಗಳಿಂದಾಗಿ ಅವರು ಹೋಗಿ ಕೆಲಸ ಮಾಡಲು ಇಷ್ಟಪಡುತ್ತಿಲ್ಲ. ಇಂತಹ ಒಂದು ಟೆಂಡೆನ್ಸಿ ಬೆಳೆದು ಬರುತ್ತಿದೆ, ಇದನ್ನು ನಾವು ವಿಚಾರ ಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಮೊದಲು ಪ್ರಮೋಷನ್ನು ಸಿಗುವಂತಹ ಅಧಿಕಾರಿಗಳನ್ನು ಪ್ರಮೋಟ್ ಮಾಡುವಾಗ ಅವರುಗಳು ಮೊದಲು ಇನ್‌ವೆಸ್ಟಿಗೇಷನ್ ಸರ್ಕಲ್ಲುಗಳಲ್ಲಿ ಕೆಲವು ಕಾಲ ಚೆನ್ನಾಗಿ ಕೆಲಸ ಕಾರ್ಯಗಳನ್ನು ಮಾಡಬೇಕು ಮತ್ತು ಅವರಿಗೆ ಪ್ರಮೋಷನ್ ಸಿಗುವುದರಿಂದ ಒಂದು ರೀತಿಯ ಉತ್ಸಾಹದಿಂದಲಾದರೂ ಕೆಲಸ ಮಾಡುತ್ತಾರೆಂದು ಇಂತಹ ಅಧಿಕಾರಿಗಳನ್ನು ಇನ್‌ವೆಸ್ಟಿಗೇಷನ್ ಸರ್ಕಲ್‌ಗಳಿಗೆ ಪೋಸ್ಟ್ ಮಾಡಬೇಕೆಂದು ಇದೆ. ಅಲ್ಲದೆ ಇಲ್ಲಿಯೂ ಕೂಡ ಅನೇಕ ಸದಸ್ಯರು ಡಿಫೆಕ್ಟೀವ್ ಇನ್‌ವೆಸ್ಟಿಗೇಷನ್ನುಗಳನ್ನು ಮಾಡುತ್ತಿರುವುದರಿಂದಾಗಿ ಕೋಟ್ಯಾಂತರ ರೂಪಾಯಿಗಳು ನಷ್ಟವಾಗುತ್ತಿದೆ, ಇದರ ಕಡೆಗೆ ಸರಕಾರ ಗಮನ ಕೊಡಬೇಕೆಂದು ಆಗಾಗ್ಗೆ ಹೇಳುತ್ತಿರುವುದೂ ತಮಗೆಲ್ಲಾ ಗೊತ್ತಿದೆ. ಬಹುಶಃ ಇದಕ್ಕಾಗಿಯೇ ಇನ್‌ವೆಸ್ಟಿಗೇಷನ್ ಸಲುವಾಗಿ ಪ್ರತ್ಯೇಕವಾದ ಡಿವಿಜನ್ನುಗಳನ್ನು ಮಾಡಿ ಅಲ್ಲಿಗೆ ಅಸಿಸ್ಟೆಂಟ್ ಇಂಜನೀಯರುಗಳನ್ನು ನೇಮಕ ಮಾಡಲಾಗಿದೆ. ಆದರೂ ಅಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು ಸುಮಾರು ನಾಲ್ಕೈರು ತಿಂಗಳ ಕಾಲ ಕೆಲಸ ಮಾಡಿ ಹೇಗಾದರೂ ಮಾಡಿಕೊಂಡು ರೆಗ್ಯುಲರ್ ಡಿವಿಜನ್ನುಗಳಿಗೆ ಬರಬೇಕೆಂದು ಬೇಕಾದಷ್ಟು ಪ್ರಯತ್ನ ಮಾಡುತ್ತಿರುತ್ತಾರೆ. ಸಾಮಾನ್ಯವಾಗಿ ನಮ್ಮ ಅಧಿಕಾರಿಗಳಲ್ಲಿ ಇಂತಹ ಒಂದು ಟೆಂಡೆನ್ಸಿ ಬೆಳೆದುಕೊಂಡು ಬರುತ್ತಿದೆ. ಇದರ ಸಲುವಾಗಿ ನಾವೇನೋ ಇರಿಗೇಷನ್ ಸರ್ಕಲ್ಲುಗಳಲ್ಲಿ ಮತ್ತು ಇನ್‌ವೆಸ್ಟಿಗೇಷನ್ ವಿಭಾಗಗಳಲ್ಲಿ ಹೆಚ್ಚಿನ ಅಧಿಕಾರಿಗಳನ್ನು ಹಾಕಲು ಪ್ರಯತ್ನ ಮಾಡುತ್ತಿದ್ದೇವೆ. ಅಲ್ಲದೆ ಇಲ್ಲ ಕೆಲವು ಅಧಿಕಾರಿಗಳು ಇರಿಗೇಷನ್ ಭಾಗದಲ್ಲಿ ನಾಲ್ಕೈರು ವರ್ಷಗಳ ಕಾಲ ಚೆನ್ನಾಗಿ ಕೆಲಸ ಮಾಡಿದ ಮೇಲೆ ಬೇರೆ ಭಾಗಗಳಲ್ಲಿ,

(ಶ್ರೀ ವೀರೇಂದ್ರ ಪಾಟೀಲ್)

ರೋಡುಗಳ ಹಾಗೂ ಕಟ್ಟಡದ ವಿಭಾಗಗಳಲ್ಲಿ ಕೆಲಸ ಮಾಡಲು ಅವಕಾಶಬೇಕೆಂದು ಕೇಳುತ್ತಾರೆ. ಅಲ್ಲದೆ ನಾವು ಅಂತಹ ಅಧಿಕಾರಿಗಳನ್ನು ನಿಮ್ಮ ಅನುಭವ ಚೆನ್ನಾಗಿದೆ ಅದರಿಂದ ಇರಿಗೇಷನ್ನು ಭಾಗದಲ್ಲಿಯೇ ಕೆಲಸ ಮಾಡಲು ಹೇಳಿದರೆ ಅವರುಗಳು ಕೆಲವು ವೇಳೆ ಒಪ್ಪುವುದಿಲ್ಲ. ಅದರಿಂದಾಗಿ ಈಚೆಗೆ ಒಂದು ಪಾಲಿಸಿಯನ್ನು ಮಾಡಿಕೊಂಡಿದ್ದೇವೆ. ಯಾರು ಯಾರು ಇಂಜನೀಯರುಗಳು ಇರಿಗೇಷನ್ ಭಾಗದಲ್ಲಿದ್ದು ಕೆಲಸ ಮಾಡುತ್ತಿದ್ದಾರೋ ಅವರನ್ನು ಅಲ್ಲೇ ಮುಂದುವರೆಸಿಕೊಂಡು ಬರಬೇಕು ಮತ್ತು ಇನ್‌ವೆಸ್ಟಿಗೇಷನ್ ಸರ್ಕಲ್ಲುಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಅಂತಹವರನ್ನು ಅಲ್ಲಿಯೇ ಮುಂದುವರೆಸಿಕೊಂಡು ಬರಬೇಕು ಎನ್ನುವುದನ್ನೂ ಗಮನದಲ್ಲಿಟ್ಟುಕೊಂಡಿದ್ದೇವೆ. ಇದರಿಂದ ದೇಶಕ್ಕೂ ಲಾಭವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಟ್ರಾನ್ಸ್‌ಫರುಗಳ ಬಗ್ಗೆ ಸರಕಾರದವರು ಇಂಟರ್‌ಫಿಯರ್ ಮಾಡುತ್ತಾರೆ ಎಂದು ಕೆಲವು ಸದಸ್ಯರು ಹೇಳಿದರು. ನಾನು ಬಂದ ಮೇಲೆ ಸೂಪರಿಂಟೆಂಡಿಂಗ್ ಇಂಜನಿಯರುಗಳಿಗೆ ಒಂದು ಸಲಹೆ ಕೊಟ್ಟು ಅವರಿರುವ ಸರ್ಕಲ್ಲುಗಳಿಗೆ ಅಸಿಸ್ಟೆಂಟ್ ಇಂಜನಿಯರುಗಳನ್ನು ಪೋಸ್ಟು ಮಾಡಲಾಗುತ್ತದೆ. ಅದರ ಮೇಲೆ ಸರಕಾರದ ಅಧಿಕಾರವಿಲ್ಲ. ಅವರ ವರ್ಗಾವರ್ಗಿಗಳನ್ನು ಸೂಪರಿಂಟೆಂಡೆಂಟ್ ಇಂಜಿನಿಯರೇ ಅವರಿಗೆ ಬೇಕಾದ ಹಾಗೆ ವರ್ಗ ಮಾಡಿಕೊಳ್ಳಬಹುದು. ಅಲ್ಲದೆ ಸೂಪರಿಂಟೆಂಡೆಂಟ್ ಇಂಜಿನೀಯರುಗಳನ್ನು ಹಾಗೂ ಎಕ್ಸಿಕ್ಯೂಟಿವ್ ಇಂಜಿನಿಯರುಗಳನ್ನು ವರ್ಗ ಮಾಡುವಾಗ ಚೀಫ್ ಇಂಜಿನೀಯರುಗಳು ಯಾವ ರೀತಿ ಸಲಹೆಗಳನ್ನು ಸರಕಾರಕ್ಕೆ ಆಗಾಗ್ಗೆ ಕಳುಹಿಸುತ್ತಾರೋ ಅದನ್ನೇ ಒಪ್ಪಿಕೊಂಡು ಟ್ರಾನ್ಸ್‌ಫರುಗಳ ಆರ್ಡರನ್ನು ಮಾಡಲಾಗುತ್ತದೆ. ಅಲ್ಲದೆ ಸೂಪರಿಂಟೆಂಡೆಂಟ್ ಇಂಜನಿಯರುಗಳೆಲ್ಲಾ ಕ್ಲಾಸ್ ಒಂದನೇ ದರ್ಜೆಯಲ್ಲಿರುವಂತಹ ಅಧಿಕಾರಿಗಳು. ಆದುದರಿಂದ ಇವರುಗಳ ಪೋಸ್ಟಿಂಗುಗಳ ವಿಚಾರದಲ್ಲಿ ಸರಕಾರದವರು ಚೀಫ್‌ಇಂಜನಿಯವರ ಸಲಹೆಗಳನ್ನು ನೂರಕ್ಕೆ ತೊಂಬತ್ತೊಂಬತ್ತು ಭಾಗದಷ್ಟು ಒಪ್ಪಿಕೊಂಡಿದ್ದೇವೆ ಎಂದು ಇಲ್ಲಿ ಘಂಟಾಘೋಷವಾಗಿ ಹೇಳಬಯಸುತ್ತೇನೆ. ಆದುದರಿಂದ ಈ ಅಧಿಕಾರಿಗಳ ವರ್ಗಾವರ್ಗಿಯಲ್ಲಿ ಯಾವ ತರಹದ ಹಸ್ತಕ್ಷೇಪವನ್ನೂ ಮಾಡಿಲ್ಲ ಎನ್ನುವುದನ್ನು ಇಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ.

ಇನ್ನೊಂದು ಅಪಾಯಿಂಟುಮೆಂಟುಗಳ ಬಗ್ಗೆ ಇಲ್ಲಿ ಹೇಳಿದ್ದಾರೆ. ನಾವು ಹಳೆಯ ಮೈಸೂರಿನವರು, ನೀವು ಹೊಸ ಮೈಸೂರಿನವರು, ಎಂದು ಪಕ್ಷಪಾತ ಮಾಡುತ್ತಾರೆಂದು ಹೇಳಿದರು. ನನಗೆ ತಿಳಿದಿರುವಂತೆ ಇಲ್ಲಿ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಎಂದೇನಿದೆ, ಅದರ ನಿಯಮಗಳನ್ನನುಸರಿಸಿಕೊಂಡು ಇಲ್ಲಿ ನೇಮಕಗಳನ್ನು ಮಾಡಲಾಗುತ್ತಿದೆ. ಇದರಲ್ಲಿ ಶೇಕಡಾ ನಲವತ್ತರಷ್ಟು ಡೈರೆಕ್ಟ್ ರೆಕ್ರೂಟುಮೆಂಟಿನ ಮೇಲೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಮೂಲಕ ಚುನಾಯಿಸಿ ಬರುತ್ತಾರೆ. ಈಗಾಗಲೇ ತಮಗೆಲ್ಲ ತಿಳಿದಿರುವಂತೆ ಈಚೆಗೆ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ನೇಮಕದ ಮೇಲೆ ಕೇಸಾಗಿ ಈಗ ಅದು ಸುಪ್ರೀಂ ಕೋರ್ಟಿನ ವರೆಗೂ ಹೋಗಿದೆ. ಅದರೆ ಸಿಲೆಕ್ಷನ್ ಬಗ್ಗೆ ಹೇಳಲು ಸುಪ್ರೀಂ ಕೋರ್ಟಿನಲ್ಲಿ ಕೇಸು ಇರುವುದರಿಂದ ನಾನೇನೂ ಹೇಳಬಯಸುವುದಿಲ್ಲ. ಇದರಲ್ಲಿ ಹೊಸ ಮೈಸೂರು ಎಷ್ಟು ಮತ್ತು ಹಳೆಯ ಮೈಸೂರು ಎಷ್ಟು ಎನ್ನುವ ವಾದ ಕೂಡ ಬಂತು. ಆದರೆ ಈಚೆಗೆ ನಮ್ಮ ರಾಜ್ಯದಲ್ಲಿ ಬಿ.ಡಿ.ಒ.ಗಳ ನೇಮಕವಾದಾಗ ಯಾರೂ ಇದರ ಬಗ್ಗೆ ಆಗ ಪ್ರಸ್ತಾಪ ಮಾಡಲಿಲ್ಲ. ಅಲ್ಲದೆ ನನಗೆ ತಿಳಿದಂತೆ ಆದರಲ್ಲಿ 1939 ರಲ್ಲಿ 30 ಜನರನ್ನು ಹಳೆಯ ಮೈಸೂರು ಭಾಗಕ್ಕೇ ಸೇರಿದವರನ್ನು ರೆಕ್ರೂಟ್ ಮಾಡಲಾಯಿತು. ಇನ್ನು ಹಳೆಯ ಮೈಸೂರಿನ ಸರ್ವಿಸಿನಲ್ಲಿ ಎಷ್ಟು ಜನರು ಕೆಲಸ ಮಾಡುತ್ತಿದ್ದರು ಎನ್ನುವ ಅಂಕೆಸಂಖ್ಯೆಗಳೆಲ್ಲಾ ನನ್ನ ಬಳಿ ಇವೆ. ಇದರಲ್ಲಿ ಜೂನಿಯರ್ ಇಂಜನೀಯರುಗಳ ನೇಮಕಗಳಲ್ಲಿ ಏನು ಭಾವನೆಗಳನ್ನು ಇಟ್ಟುಕೊಂಡಿದ್ದೇವೆನ್ನುವುದನ್ನು ಇಲ್ಲಿ ವಿಶದಪಡಿಸಬೇಕಾಗಿದೆ. ಜೂನಿಯರ್ ಇಂಜನೀಯರುಗಳಿಗಾಗಿ ಹೆಚ್ಚಿನ ವೇಕೆನ್ಸಿಗಳೂ ಕೂಡ ಇವೆ. ಆದರೆ ಇಡೀ ದೇಶದಲ್ಲಿ ಹೆಚ್ಚುಹೆಚ್ಚು ಇಂಜನೀಯರಿಂಗ್ ಕಾಲೇಜುಗಳೂ ಆಗುತ್ತಿವೆ. ನಮ್ಮ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ಎಲೆಕ್ಟ್ರಿಸಿಟಿ ಬೋರ್ಡ್ ಬಿಟ್ಟು ನಮ್ಮ ಸಿವಿಲ್ ಸೈಡ್ ಪಿ.ಡಬ್ಲ್ಯು.ಡಿ. ಭಾಗದಲ್ಲಿ 450 ಜನ ಜೂನಿಯರ್ ಇಂಜನೀಯರುಗಳು ಈಗ ಬೇಕಾಗಿದ್ದಾರೆ. ಈ ಪೋಸ್ಟುಗಳಲ್ಲೆಲ್ಲಾ ಈಗ ಸೂಪರ್‌ವೈಸರುಗಳು ಮತ್ತು ಡಿಪ್ಲೊಮಾ ಹೋಲ್ಡರುಗಳು ಇಲ್ಲಿ ಬಂದು ಕೆಲಸ ಮಾಡುತ್ತಿದ್ದಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಟೋಟಲ್ ನಂಬರ್ ಆಫ್ ಜೂನಿಯರ್ ಇಂಜನೀಯರುಗಳು ನಮ್ಮ ರಾಜ್ಯದಲ್ಲಿ ಎಷ್ಟಿದ್ದಾರೆ?

ಶ್ರೀ ವೀರೇಂದ್ರ ಪಾಟೀಲ್.—2,176 ಜನ ಜೂನಿಯರ್ ಇಂಜನೀಯರುಗಳಿದ್ದಾರೆ. ಇದರಲ್ಲಿ 432 ವೇಕೆನ್ಸಿಗಳು ಈಗ ಇವೆ. ಇದನ್ನು ಭರ್ತಿಮಾಡುವಾಗ ಇಲ್ಲಿ ಹಳೆಯ ಮೈಸೂರು ಭಾಗದವರು, ನಾವೆಲ್ಲ ಬೊಂಬಾಯಿ, ಹೈದರಾಬಾದು ಮತ್ತು ಇತರ ಇಂಟಿಗ್ರೇಟೆಡ್ ಏರಿಯಾದಂತೆ ಇಲ್ಲಿ

ಕ್ರಿಯೇಟು ಮಾಡಿಲ್ಲ, ಇದನ್ನು ವಿಚಾರ ಮಾಡುವಾಗ ನಮ್ಮ ರಾಜ್ಯದಲ್ಲಿ ಹೋದ ವರ್ಷ ಎರಡು ಇಂಜನೀಯರಿಂಗ್ ಕಾಲೇಜುಗಳಾದವು. ಇವುಗಳಲ್ಲಿ ಸುಮಾರು ಇದರ ಇಂಟೇಕ್ 2,000 ದಷ್ಟು ಬಂದಿರಬಹುದು ಮತ್ತು ಇದರಲ್ಲಿ ಮುಂದಿನ ವರ್ಷದಲ್ಲಿ ಸುಮಾರು 1,000 ದಷ್ಟಾದರೂ ಪ್ರೊಡಕ್ಷನ್ನು ಬರಬಹುದು. ಈಗ ನಮ್ಮ ಇಲಾಖೆಯಲ್ಲಿ 432 ವೇಕೆನ್ಸಿಗಳು ಇವೆ. ಇದರ ಅಪಾಯಿಂಟುಮೆಂಟುಗಳಲ್ಲಿ ಏನು ಪಕ್ಷಪಾತ ಮಾಡಿದ್ದೇವೋ ನನಗೆ ಕಾಣುತ್ತಿಲ್ಲ. ನಮಗೆ ಇನ್ನೂ ಗ್ರಾಜುಯೇಟ್ ಇಂಜನಿಯರುಗಳು ಬೇಕು.

ಶ್ರೀ ಎಚ್. ಆರ್. ಕೇಶವಮೂರ್ತಿ.—ಗ್ರಾಜುಯೇಟ್ ಇಂಜನಿಯರುಗಳು ಜೂನಿಯರ್ ಇಂಜಿನಿಯರ್ ಹುದ್ದೆಗಳಿಗೆ ಅರ್ಜಿ ಹಾಕಿಕೊಂಡಿದ್ದರೂ ಅವರಿಗೆ ಕೆಲಸ ಕೊಡದೆ ಡಿಪ್ಲೊಮೋ ಹೋಲ್ಡರುಗಳಿಗೇ ಕೆಲಸ ಕೊಡುತ್ತಿದ್ದಾರೆಂದು ಜನರು ಆಕ್ಷೇಪಣೆ ಮಾಡುತ್ತಿದ್ದಾರಲ್ಲಾ ಅದುಕ್ಕೇನು ಹೇಳುತ್ತೀರಿ?

ಶ್ರೀ ವೀರೇಂದ್ರ ಪಾಟೀಲ್.—ಗ್ರಾಜುಯೇಟ್ ಇಂಜಿನಿಯರುಗಳನ್ನು ನಾವು ಹಾಗೆ ಎಂದೂ ಹಿಂದಕ್ಕೆ ಕಳುಹಿಸಿಲ್ಲ. ಈ ದಿವಸ ಹಾಗೆ ಕೆಲಸವಿಲ್ಲದೇ ಇರತಕ್ಕ ಇಂಜಿನಿಯರಿಂಗ್ ಗ್ರಾಜುಯೇಟ್ ಇದ್ದರೆ ಅವರನ್ನು ಕರೆಸಿ, ಈ ದಿವಸ ಸಾಯಂಕಾಲದೊಳಗಾಗಿ ಅವರಿಗೆ ಕೆಲಸ ಕೊಡಿಸುತ್ತೇನೆ. ನಾನು ಇಷ್ಟು ಹೇಳಿದಾಗ್ಯೂ ತಮಗೆ ಆ ಒಂದು ಸಂಶಯ ಭಾವನೆಯೇ ತಮ್ಮ ಮನಸ್ಸಿನಲ್ಲಿ ಮನೆ ಮಾಡಿಕೊಂಡಿದ್ದರೆ ಅದಕ್ಕೆ ನಾನೇನು ಮಾಡಲಿ?

ಇನ್ನೊಂದು ನಮ್ಮ ಮೇಲೆ ಎತ್ತಿರತಕ್ಕ ದೊಡ್ಡ ಆಕ್ಷೇಪಣೆಯೇನೆಂದರೆ ಹಳೇ ಮೈಸೂರಿನ ದುಡ್ಡನ್ನೆಲ್ಲಾ ಹೊಸ ಮೈಸೂರಿಗೆ ಒಯ್ದು 'ಅಟ್ ದಿ ಕಾಸ್ಟ್ ಆಫ್ ದಿ ಓಲ್ಡ್ ಮೈಸೂರ್' ಹೊಸ ಮೈಸೂರು ರಾಜ್ಯದ ಅಭಿವೃದ್ಧಿಯನ್ನು ಮಾಡುತ್ತಿದ್ದಾರೆಂದು ನಮ್ಮ ಮೇಲೆ ಒಂದು ದೊಡ್ಡ ಛಾರ್ಜನ್ನು ಹೊರಿಸಿದ್ದಾರೆ. ಇದರಲ್ಲಿ ಎಷ್ಟರಮಟ್ಟಿಗೆ ಸತ್ಯಾಂಶವಿದೆಯೆಂಬುದನ್ನು ಮುಂದೆ ತಿಳಿಸುವವನಿದ್ದೇನೆ. ಈ ಪ್ರದೇಶಗಳ ಅಭಿವೃದ್ಧಿಯ ವಿಚಾರದಲ್ಲಿ ಒಂದು ತತ್ವವಿದೆ. ಸಾಮಾನ್ಯವಾಗಿ ಡೆವೆಲಪ್ ಆಗಿರತಕ್ಕ ಏರಿಯಾ ಯಾವುದು, ಅನ್‌ಡೆವೆಲಪ್ಡ್ ಏರಿಯಾ ಯಾವುವುದು, ಅಂಡರ್ ಡೆವೆಲಪ್ಡ್ ಏರಿಯಾ ಯಾವುದು ಎಂಬುದನ್ನೆಲ್ಲಾ ಪರಿಶೀಲಿಸಿ, ಈ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತದೆ. ಪ್ಲಾನಿಂಗ್ ಕಮಿಷನ್ನಿನವರೂ ಕೂಡ ಅದನ್ನೇ ಹೇಳುತ್ತಿದ್ದಾರೆ. ಆದರೆ ಅಭಿವೃದ್ಧಿಯಲ್ಲಿ ಹಿಂದುಳಿದಿರತಕ್ಕ ಪ್ರದೇಶ ಕೇವಲ ಬೊಂಬಾಯಿ ಕರ್ಣಾಟಕ ಒಂದರಲ್ಲೇ ಇಲ್ಲ; ಅಥವಾ ಹೈದ್ರಾಬಾದ್ ಏರಿಯಾ ಒಂದರಲ್ಲೇ ಇರುವುದಿಲ್ಲ, ಹಳೇ ಮೈಸೂರು ಏರಿಯಾದಲ್ಲೂ ಇದೆ. ಆದರೆ ಶ್ರೀಮಾನ್ ಗೋಪಾಲ ಗೌಡರು ಒಂದು ವಿಚಾರವನ್ನು ಹೇಳುತ್ತಿದ್ದಾರೆ. ಅವರ ಮಲೆನಾಡಿನ ರಸ್ತೆಗಳ ಬಗ್ಗೆ ಅಲ್ಲಿ ಮಳೆಬಹಳ ಹೆಚ್ಚಾಗಿರುವುದರಿಂದ ಮಣ್ಣಿನ ರಸ್ತೆ ಮಾಡಿಸುವುದಕ್ಕೆ ಬದಲು ಅಲ್ಲಿ ಅಸ್ಫಾಲ್ಟ್ ರಸ್ತೆಗಳನ್ನು ಮಾಡಿಸಿ ಎಂದು ಹೇಳುತ್ತಿದ್ದಾರೆ. ಇನ್ನು ಅಲ್ಲಿ ಹಳ್ಳಗಳು ಜಾಸ್ತಿಯಾಗಿ ಹರಿಯುತ್ತಿವೆ. ಅವುಗಳಿಗೆ ಕಾಜ್‌ವೇಗಳನ್ನು ಮಾಡಿಸಿ ಎಂದು ಕೇಳುತ್ತಿದ್ದಾರೆ. ಆ ಮಲೆನಾಡು ಪ್ರದೇಶಕ್ಕೆ ಈ ಅನುಕೂಲಗಳೆಲ್ಲಾ ಆಗಲೇಬೇಕು. ಅವರು ಈ ವಿಚಾರವನ್ನು ಹೇಳುತ್ತಿದ್ದರೆ ನನಗೇ ಕಣ್ಣಿನಲ್ಲಿ ನೀರುಬರುವಂತಾಗುತ್ತದೆ. ಈ ಅನುಕೂಲಗಳು ಅಲ್ಲಿಗೆ ಅತ್ಯಗತ್ಯವಾಗಿ ಬೇಕು. ನಾನು ಈ ವಿಚಾರಗಳನ್ನೆಲ್ಲಾ ಏತಕ್ಕಾಗಿ ಹೇಳುತ್ತಿದ್ದೇನೆಂದರೆ; ಈ ಅನ್‌ಡೆವಲಪ್ಡ್ ಏರಿಯಾಗಳು ಹಳೇ ಮೈಸೂರು ಭಾಗದಲ್ಲಿ ಸ್ವಲ್ಪ ಕಡಮೆಯಾಗಿರಬಹುದು, ಹೊಸ ಮೈಸೂರು ಏರಿಯಾದಲ್ಲಿ ಸ್ವಲ್ಪ ಜಾಸ್ತಿಯಾಗಿರಬಹುದು; ಅಷ್ಟೆ: ಈ ಎಲ್ಲಾ ಹಿಂದುಳಿದಿರತಕ್ಕ ಪ್ರದೇಶಗಳ ಅಭಿವೃದ್ಧಿಯನ್ನೂ ಮಾಡಲೇಬೇಕೆಂಬ ಪ್ರಯತ್ನದಲ್ಲೇ ನಾವಿದ್ದೇವೆ. ಈ ಬ್ಯಾಕ್‌ವರ್ಡ್ ಏರಿಯಾಗಳನ್ನು ಮುಂದಕ್ಕೆ ತರತಕ್ಕ ಬಗ್ಗೆ ಹೇಗೆಂಬುದನ್ನು ನಾವು ತೀವ್ರವಾಗಿ ಆಲೋಚನೆ ಮಾಡುತ್ತಿದ್ದೇವೆ. ಆದರೆ ಈ ಅಭಿವೃದ್ಧಿಯ ಬಗ್ಗೆ ಹೊಸಮೈಸೂರಿನ ದುಡ್ಡನ್ನು ಹೊಸ ಮೈಸೂರಿಗೇ ಮೀಸಲಾಗಿಡಬೇಕು, ಹಳೇ ಮೈಸೂರಿನ ದುಡ್ಡನ್ನು ಹಳೇ ಮೈಸೂರಿಗೇ ಮೀಸಲಾಗಿಡಬೇಕು ಎಂಬ ತತ್ವವನ್ನು ಮಾತ್ರ ನಾವು ಒಪ್ಪುವುದಿಲ್ಲ. ಈ ದಿವಸ ಚಿಕ್ಕಮಗಳೂರಿನಲ್ಲಿ ಖನಿಜ ಸಂಪತ್ತು ಹಾಗೂ ಅರಣ್ಯ ಸಂಪತ್ತು ಜಾಸ್ತಿಯಾಗಿದೆ. ಇದೂ ಹಳೇ ಮೈಸೂರಿನಲ್ಲೇ ಇದೆ. ಆದರೆ ಈ ಅನುಕೂಲಗಳು ಇನ್ನಿತರ ಕೆಲವು ಜಿಲ್ಲೆಗಳಿಗಿರುವುದಿಲ್ಲ. ಆದ್ದರಿಂದ ಆ ಚಿಕ್ಕಮಗಳೂರು ಜಿಲ್ಲೆಯ ವರಮಾನವನ್ನೆಲ್ಲಾ ಆ ಜಿಲ್ಲೆಗೇ ಮುಡುಪಾಗಿಡಬೇಕೆಂದರೆ ಅದು ಹೇಗೆ ಸಾಧ್ಯ? ಹಾಗೊಂದು ವೇಳೆ ನಾವೀದಿವಸ ಈ ತತ್ವ ಸರಿಯಾಗಿದೆಯೆಂದು ಒಪ್ಪಿಕೊಂಡೆವೆಂದರೆ—ನಾಳೆಯ ದಿವಸ ಇದೇ ತತ್ವದ ಮೇಲೆ ಶ್ರೀಮಂತರ ದುಡ್ಡನ್ನೆಲ್ಲಾ ಶ್ರೀಮಂತರ ಅಭಿವೃದ್ಧಿಗೇ ಬಳಸಬೇಕಾಗುತ್ತದೆ. ಬರೀ ಬಡವರ ದುಡ್ಡನ್ನು ಮಾತ್ರ ಬಡವರಿಗೆ ಉಪಯೋಗಿಸಬೇಕಾಗುತ್ತದೆ. ಶ್ರೀಮಂತರ ದುಡ್ಡನ್ನು ಬಡವರ ಅಭಿವೃದ್ಧಿಗೆ ಬಳಸಬಾರದೆಂದು ಹೇಳತಕ್ಕ ತತ್ವವನ್ನು ನಾವು ಒಪ್ಪುವುದಕ್ಕಾಗುವುದಿಲ್ಲ. ಇನ್ನೂ ಒಂದು ಉದಾಹರಣೆಯನ್ನು ನಾನು ತಮಗೆ ಕೊಡುವುದಾದರೆ: ಶತ ಶತಮಾನಗಳಿಂದಲೂ ಹಿಂದುಳಿದಿದ್ದ ಹರಿಜನರ ಅಭಿವೃದ್ಧಿ ಈ ದಿವಸ ಆಗಬೇಕಾಗಿದೆ. ಈ ದಿವಸ ಅವರಿಂದ ಸರ್ಕಾರಕ್ಕೆ ಬರತಕ್ಕ ದುಡ್ಡೇನಿದೆ ಅಥ

(ಶ್ರೀ ವೀರೇಂದ್ರ ಪಾಟೀಲ್)

ರಿಂದಲೇ ಅವರ ಅಭಿವೃದ್ಧಿಯಾಗಲಿ ಎಂದರೆ ಅದು ಸಾಧ್ಯವೇ? ಹೀಗೆಲ್ಲಾ ಇರುವುದರಿಂದ ಈ ವಿಚಾರದಲ್ಲಿ ದುಡ್ಡಿದ್ದವರೂ, ಮುಂದುವರಿದ ಪ್ರದೇಶದಲ್ಲಿರತಕ್ಕವರೂ ಸ್ವಲ್ಪ ತ್ಯಾಗಶೀಲರಾಗಲೇ ಬೇಕು. ಯಾವ ಮನುಷ್ಯ ಮುಂದೆ ಮುಂದೆ ಓಡುತ್ತಿದ್ದಾನೆಯೋ ಆತನನ್ನು ಹಿಂದಿನಿಂದ ಹಿಂಬಾಲಿಸುತ್ತಿರುವ ಮನುಷ್ಯ ಮುಟ್ಟಬೇಕಾಗಿದ್ದರೆ, ಜೊತೆಗೂಡಬೇಕಾಗಿದ್ದರೆ ಹಿಂದೆಬಿದ್ದಿರುವ ಮನುಷ್ಯ ಓಡಬೇಕು, ಇಲ್ಲವೇ ಮುಂದೆ ಓಡುತ್ತಿರುವ ಮನುಷ್ಯ ತನ್ನ ಓಟವನ್ನು ಸ್ವಲ್ಪ ನಿಲ್ಲಿಸಬೇಕು. ಈ ಒಂದು ತತ್ವವನ್ನರಿತೇ ಈ ದಿವಸ ಯುನೈಟೆಡ್ ನೇಷನ್ನಿನವರೂ ಸಹಾ ಸಂಬಂಧವಿಲ್ಲದೇ ಇರತಕ್ಕ ದೇಶಗಳಿಗೂ ಕೂಡ, ಅಂದರೆ ಎಲ್ಲೆಲ್ಲಿ ಅನ್‌ಡೆವಲಪ್ಡ್ ಏರಿಯಾಗಳಿವೆಯೋ ಅಂಥ ಭಾಗಗಳಿಗೆಲ್ಲಾ ಸಹಾಯವನ್ನು ನೀಡುತ್ತಿದ್ದಾರೆ. ಅವರ ದೇಶ ಯಾವುದೋ, ಅವರು ಸಹಾಯವನ್ನು ಪಡೆಯುತ್ತಿರುವ ದೇಶ ಯಾವುದೋ, ಇವುಗಳಿಗೆ ಒಂದಕ್ಕೊಂದಕ್ಕೆ ಯಾವ ಸಂಬಂಧವೂ ಇಲ್ಲ. ಹಾಗಿದ್ದರೂ ಆ ರಾಷ್ಟ್ರದವರು ತಮಗೆ ಸಂಬಂಧವಿಲ್ಲದ ರಾಷ್ಟ್ರಕ್ಕೂ ಸಹಾಯವನ್ನು ನೀಡುತ್ತಿರುವಾಗ ಇಲ್ಲಿ ಇಡೀ ಕರ್ಣಾಟಕದಲ್ಲಿರತಕ್ಕ ಒಂದೇ ದೇಶದ ಜನರಾದ ಎರಡು ಕೋಟಿ ಮೂವತ್ತೈದು ಲಕ್ಷ ಕನ್ನಡಿಗರಲ್ಲಿ ಹಳೇ ಮೈಸೂರಿನವರ ದುಡ್ಡು ಹೊಸ ಮೈಸೂರಿಗೆ ಹೋಗಬಾರದು, ಈ ದಿವಸ ಸರ್ಕಾರದವರು ಹಳೇ ಮೈಸೂರಿನ ದುಡ್ಡನ್ನೆಲ್ಲಾ ಏನೋ ಒಂದು ಛಾನಲ್ಲನ್ನೇ ಮಾಡಿ ಹೊಸ ಮೈಸೂರು ಪ್ರಾಂತ್ಯಕ್ಕೆ ಒಯ್ಯುತ್ತಿದ್ದಾರೇನೋ ಎಂದು ಜನರೆಲ್ಲಾ ತಿಳಿದುಕೊಳ್ಳುವಂತೆ ನಮ್ಮಮೇಲೊಂದು ದೊಡ್ಡ ಅಪಾದನೆಯನ್ನು ಹೊರಿಸಿದ್ದಾರೆ. ನಾನೀಗ ತಮಗೆ ಕೆಲವು ಅಂಕೀಅಂಶಗಳನ್ನು ಕೊಟ್ಟು ಯಾವ ಯಾವ ಪ್ರದೇಶದಲ್ಲಿ ಎಷ್ಟೆಷ್ಟು ಹಣ ಖರ್ಚಾಗಿದೆ ಎಂಬುದನ್ನು ತಿಳಿಸಿದರೆ ಆಗ ತಮಗೆ ತಾವು ಹೇಳಿದ್ದು ಸರಿಯೋ ಅಥವಾ ಅಲ್ಲವೇ ಎಂಬುದು ತನಗೆ ತಾನೆ ಗೊತ್ತಾಗುವುದು. ಈ ಹಿಂದೆ 1956 ರಲ್ಲಿ ಕರ್ಣಾಟಕ ಏಕೀಕರಣವಾಗತಕ್ಕ ಕಾಲದಲ್ಲಿ ಹೈದ್ರಾಬಾದ್ ಕರ್ಣಾಟಕ ಪ್ರದೇಶದಿಂದ ಬಂದಿದ್ದ ಮಾನ್ಯ ಸದಸ್ಯರು ಈಗಲೂ ಇದೇ ಸಭೆಯಲ್ಲಿದ್ದಾರೆ. ಈ ಹಿಂದೆ ಹೈದ್ರಾಬಾದ್ ಸ್ಟೇಟಿಗೆ ಸೇರಿದ್ದ ತೆಲಂಗಣ ಪ್ರದೇಶವು ಆಂಧ್ರಕ್ಕೆ ಸೇರಲು ಇಷ್ಟವಿರಲಿಲ್ಲ. ಆ ಪ್ರದೇಶದವರೇ ಸಪರೇಟಾಗಿರಬೇಕೆಂದಿದ್ದರು. ಅದಕ್ಕೆ ಕಾರಣವೇನೆಂದರೆ; ಅವರ ಪ್ರದೇಶ ಬಹಳ ಹಿಂದುಳಿದ ಪ್ರದೇಶ, ಅವರು ಆಂಧ್ರಕ್ಕೆ ಸೇರಿಕೊಂಡರೆ ಅವರ ಅಭಿವೃದ್ಧಿಗೆ ಕುಂಠಿತವಾಗಬಹುದೆಂದು ಅವರು ಹಾಗೆ ಹಟ ಹಿಡಿದಿದ್ದರು. ಆಗ ಅವರ ಅಹವಾಲೇನೆಂದು ಕೇಂದ್ರ ಸರ್ಕಾರದವರು ಕೇಳಿದಾಗಲೂ ಅದನ್ನೇ ಅವರು ಹೇಳಿದರು. ಅದಕ್ಕೇನಾಗಬೇಕೆಂದು ಕೇಂದ್ರ ಸರ್ಕಾರದವರು ಕೇಳಿದಾಗ ಆ ತೆಲಂಗಣಾದವರು ಅವರಿಗೊಂದು ರೀಜನಲ್ ಸಮಿತಿ ಮಾಡಬೇಕೆಂದು ಬೇಡಿಕೊಂಡರು. ಆಗ ಅದರಂತೆ ಆ ಸಮಿತಿಯನ್ನು ಮಾಡಲಾಯಿತು. ಆ ಸಮಿತಿ ಈಗಲೂ ಇದೆ. ಆ ವೇಳೆಯಲ್ಲಿ ಆ ತೆಲಂಗಣಾದವರು ಈ ಕರ್ಣಾಟಕಕ್ಕೆ ಸೇರಲಿದ್ದ ನಮಗೂ ಕೂಡ ನೀವೂ ಹೀಗೇ ಒಂದು ರೀಜನಲ್ ಸಮಿತಿಯನ್ನು ಬೇಡಿ, ನಿಮ್ಮ ಪ್ರದೇಶವೂ ಕೂಡ ಬಹಳ ಹಿಂದುಳಿದ ಪ್ರದೇಶ ಎಂದು ನಮಗೆ ಉಪದೇಶ ಮಾಡಿದರು. ಆಗ ನಾವು ಅವರಿಗೆ ಇಷ್ಟೇ ಹೇಳಿದೆವು: ನಾವೀದಿವಸ ಎಲ್ಲಿಗೂ ಹೋಗುತ್ತಿಲ್ಲ; ನಾವು ನಮ್ಮ ಅಣ್ಣ ತಮ್ಮಂದಿರೊಡನೆ ಕೂಡಿಕೊಳ್ಳುವುದಕ್ಕೆ ಹೋಗುತ್ತಿದ್ದೇವೆ. ಕನ್ನಡಿಗರಾದ ನಾವೆಲ್ಲರೂ ಯುಗ ಯುಗಾಂತರದಿಂದ ಒಂದೇ ಆಗಿದ್ದವರು; ಈ ದಿವಸ ನಾವೆಲ್ಲರೂ ಒಂದೇಕಡೆ ಇರಲು ಆಶೆಪಟ್ಟಿದ್ದೇವೆ. ಆದಕಾರಣ ಯಾವ ಒಂದು ಕಂಡೀಷನನ್ನೂ ಹಾಕದೆ 31 ಲಕ್ಷ ಹೈದ್ರಾಬಾದಿನ ಕನ್ನಡಿಗರು ಬಂದು ಈಗ ಈ ಮೈಸೂರು ರಾಜ್ಯದಲ್ಲಿ ಸೇರಿರುತ್ತೇವೆ. ರಾಜ್ಯಗಳ ಪುನರ್ವಿಂಗಡಣೆಯಾದ ಕಾಲಕ್ಕೆ ಈ ಹೊಸ ಮೈಸೂರು ರಾಜ್ಯಕ್ಕೆ ಪ್ರಥಮ ಬಾರಿಗೆ ಫೈನಾನ್‌ಷಿಯಲ್ ಕಮಿಷನ್ನಿನವರು 19 7ರಲ್ಲಿ ಬಂದಿದ್ದಾಗ್ಗೆ ನಾವು ಆ ಕಮಿಷನ್ನಿನವರನ್ನು ಕಂಡು ನಮ್ಮ ಹೈದ್ರಾಬಾದ್ ಕರ್ಣಾಟಕ ಬಹಳ ಹಿಂದುಳಿದ ಪ್ರದೇಶ, ಆದಾಗ್ಯೂ ನಾವೇನೋ ಒಂದೇ ಭಾವನೆಯಿಂದ ಇಲ್ಲಿಗೆ ಬಂದು ಸೇರಿರುತ್ತೇವೆ. ನಮ್ಮ ಪ್ರದೇಶದ ಅಭಿವೃದ್ಧಿಗೆ ಕೇಂದ್ರದವರ ಧನಸಹಾಯ ಅತ್ಯಗತ್ಯವಾಗಿದೆ. ಯೆಂದು ಬೇಡಿಕೊಂಡಾಗ ಅವರು ನಮ್ಮ ಅಹವಾಲನ್ನು ಕೇಳಿ ನಾವು ಹೇಳುತ್ತಿರುವುದು ಸತ್ಯವಾಗಿದ್ದ ಕಾರಣ ಅವರು ನಮಗೆ ವರ್ಷಂಪ್ರತಿ 6 ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ಕೊಡುವುದಾಗಿ ಒಪ್ಪಿಕೊಂಡು ಈಗ ಅದರಂತೆ ದುಡ್ಡನ್ನು ಕೊಡುತ್ತಿದ್ದಾರೆ. ನಮಗೆ ಈಗ ಅವರಿಂದ ಇಷ್ಟು ಸಹಾಯ ನಮಗೆ ಬರುತ್ತಿದೆ. ಇನ್ನು ನಾವು ಕಳೆದ ಈ ಏಳು ವರ್ಷಗಳಲ್ಲಿ ಏನೇನು ಅಭಿವೃದ್ಧಿ ಮಾಡಿದ್ದೇವೆ ಎಂಬುದನ್ನು ಜಿಲ್ಲಾವಾರಾಗಿ ತಮಗೆ ತಿಳಿಸಬೇಕೆಂದಿದ್ದೇನೆ. ಇದೇ ವಿಚಾರದಲ್ಲಿ ತಮಗೆಲ್ಲಾ ಈಗಾಗಲೇ ಒಂದು ಕೈಪಿಡಿಯನ್ನೂ ಸಹಾ ಕೊಟ್ಟಿರುತ್ತೇನೆ. ಅದರಲ್ಲಿಯೂ ಈ ವಿಚಾರಗಳೆಲ್ಲಾ ಇರುತ್ತವೆ. ನಾನೀಗ ಕೊಡತಕ್ಕ ಅಂಕಿ ಅಂಶಗಳನ್ನು ತಾವು ವೀಕ್ಷಿಸಿದರೆ ಯಾವ ಯಾವ ಪ್ರದೇಶದ ಅಭಿವೃದ್ಧಿ ಎಷ್ಟೆಷ್ಟರಮಟ್ಟಿಗಾಗಿದೆ ಎಂಬುದು ತಮಗೆ ಗೊತ್ತಾಗುತ್ತದೆ. ಆದರೆ ನಾನು ಈಗ ಒಂದು ಸ್ಟೇಟ್‌ಮೆಂಟನ್ನು ತಯಾರುಮಾಡಿಕೊಂಡು ಬಂದಿದ್ದೇನೆ,

ಇದನ್ನು ನಾನು ಬಹಳ ಆತುರದಲ್ಲಿ ತಯಾರು ಮಾಡಿಕೊಂಡು ಬಂದಿದ್ದೇನೆ. ಇದರಲ್ಲಿ ಒಂದು ವೇಳೆ ತಪ್ಪಿದ್ದರೆ ಸರಿಪಡಿಸಿಕೊಳ್ಳೋಣ. 1956-57 ರಿಂದ 1962-63 ರ ರವರೆಗೆ ರಸ್ತೆ ಮತ್ತು ಸೇತುವೆಗಳ ಬಗ್ಗೆ ಈ 7 ವರ್ಷಗಳಲ್ಲಿ ಖರ್ಚು ಮಾಡಿರತಕ್ಕ ಮೊಬಲಗೆಷ್ಟು ಎಂದರೆ :—ಈ ಬಾಬಿನಲ್ಲಿ ಈವರೆಗೆ ಖರ್ಚಾಗಿರತಕ್ಕದ್ದು 46 ಕೋಟಿ 78 ಲಕ್ಷದ 9 ಸಾವಿರ ರೂಪಾಯಿಗಳು. ಇಷ್ಟು ಹಣ ಇಡೀ ಸ್ಟೇಟಿಗೆ ಖರ್ಚಾಗಿರತಕ್ಕದ್ದು. ಇದರಲ್ಲಿ ಹೈದ್ರಾಬಾದ್ ಕರ್ಣಾಟಕಕ್ಕೆ ಖರ್ಚಾಗಿರುವುದು—4 ಕೋಟಿ 44 ಲಕ್ಷ 7 ಸಾವಿರ ರೂಪಾಯಿಗಳು. ಬೊಂಬಾಯಿ ಕರ್ಣಾಟಕಕ್ಕೆ ಖರ್ಚಾಗಿರುವುದು 26 ಕೋಟಿ 62 ಲಕ್ಷ ರೂಪಾಯಿಗಳು. ಇನ್ನು ದಕ್ಷಿಣ ಕನ್ನಡಾ ಜಿಲ್ಲೆಗೆ ಖರ್ಚಾಗಿರುವುದು—6 ಕೋಟಿ 63 ಲಕ್ಷ. ಹಳೇ ಮೈಸೂರು ಭಾಗಕ್ಕೆ ಖರ್ಚಾಗಿರುವುದು : 23 ಕೋಟಿ 65 ಲಕ್ಷದ 32 ಸಾವಿರ ರೂಪಾಯಿಗಳು.

ಹಿಂದೆ ಹೇಳಿದ ಅಂಕೆ ಅಂಶಗಳು ಸ್ವಲ್ಪ ಅದಲು ಬದಲುಗಳಾಗಿವೆ. ಆದ್ದರಿಂದ ಈಗ ಮತ್ತೊಮ್ಮೆ ಸರಿಯಾದ ಅಂಕಿ ಅಂಶಗಳನ್ನು ಹೇಳುತ್ತೇನೆ. ಕೆಲವು ಏರಿಯಾಗಳಲ್ಲಿ ಖರ್ಚಾಗಿರುವ ಅಂಕಿ ಅಂಶಗಳು ಈ ರೀತಿ ಇವೆ :—

		ರೂಪಾಯಿಗಳು
ಹೈದರಾಬಾದ್ ಕರ್ಣಾಟಕ	...	4,44,07,000
ಬೊಂಬಾಯಿ ಕರ್ಣಾಟಕ	...	10,88,31,000
ದಕ್ಷಿಣ ಕೆನರಾ ...	...	5,82,81,000
ಹಳೆಯ ಮೈಸೂರು ...	...	22,65,32,000
ಕೊಡಗು ...	...	1,97,58,000
ಒಟ್ಟು	...	45,78,09,000

ಒಟ್ಟು 45,78,09,000 ರೂಪಾಯಿಗಳನ್ನು ಖರ್ಚು ಮಾಡಿದೆ. ಈ 46 ಕೋಟಿ ರೂಪಾಯಿಗಳನ್ನು ಹೇಗೆ ಖರ್ಚು ಮಾಡಿದ್ದೇವೆ ಎಂಬ ಬಗ್ಗೆ ಏರಿಯಾ ಮತ್ತು ಪರ್ಸೆಂಟೇಜನ್ನೂ ಸಹ ಈಗ ಕೊಡುತ್ತೇನೆ.

		ಶೇಕಡದಲ್ಲಿ ಏರಿಯಾ	ಶೇಕಡದಲ್ಲಿ ಖರ್ಚು
ಹೈದರಾಬಾದ್ ಕರ್ಣಾಟಕ	...	18.79	9.70
ಬೊಂಬಾಯಿ ಕರ್ಣಾಟಕ	...	28,33	23.77
ದಕ್ಷಿಣ ಕೆನರಾ ...	...	4.38	12.73
ಹಳೆಯ ಮೈಸೂರು	...	46.36	49.48
ಕೊಡಗು ...	...	2.14	4.32

ಈ ರೀತಿ 7 ವರ್ಷಗಳಲ್ಲಿ ಖರ್ಚು ಮಾಡಿದ್ದೇವೆ. ನಾನು ಬಂದ ಮೇಲೆ ಎಷ್ಟೆಷ್ಟು ಒಂದೊಂದು ಏರಿಯಾದಲ್ಲಿ ಖರ್ಚಾಗಿದೆಯೆಂಬುದನ್ನು ವಿಚಾರಮಾಡಬೇಕಾಗಿದೆ.

[MR. SPEAKER in the Chair]

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಮಂತ್ರಿಗಳು ಯಾವುದೋ ಒಂದು ಪ್ರತ್ಯೇಕವಾದ ಆಧಾರದ ಮೇಲೆ ಈ ತರಹ ಅಂಕಿ ಅಂಶಗಳನ್ನು ಕೊಡುವುದರಿಂದ ಅವರೇ ಧಕ್ಕೆ ತರುತ್ತಿದ್ದಾರೆ.

SRI S. SIVAPPA.—On a Point of Order, Sir. You were pleased to say, in the course of the debate, that as far as possible, any discussion or any speech aggrivating the feelings of the people of the two States theory should not be made. I appealed to the Minister in the beginning that if he were to refer to any development, it should be on the overall development of the country. He is only side-tracking the issue. What is the economic development they have done ?

ಶ್ರೀ ವೀರೇಂದ್ರ ಪಾಟೀಲ್.—ಏನೇನು ಅಭಿವೃದ್ಧಿ ಕಾರ್ಯಗಳನ್ನು ಸ್ಥಾಪಿಸಿದ್ದೇವೆ ಎನ್ನುವುದನ್ನೂ ಸಹ ಹೇಳುತ್ತೇನೆ. ಏಕೆಂದರೆ ವಿರೋಧ ಪಕ್ಷದ ಕೆಲವು ಮಾನ್ಯ ಸದಸ್ಯರು ಸರ್ಕಾರದ ಮೇಲೆ ಸೀರಿಯಸ್ ಚಾರ್ಜ್ ಮಾಡಿದ್ದಾರೆ. ಅದನ್ನು ಕೇಳುವುದಕ್ಕೆ ಇವರು ತಯಾರಿಲ್ಲವೆಂದರೆ ನಾನೇನು ಮಾಡುವುದಕ್ಕಾಗುತ್ತದೆ?

ಅಧ್ಯಕ್ಷರು.—ಮಾಡಿದ್ದಂಥ ಚಾರ್ಜನ್ನು ಹಿಂದಕ್ಕೆ ತೆಗೆದುಕೊಳ್ಳುತ್ತಾರೆ.

ಶ್ರೀ ಎಚ್. ಆರ್. ಕೇಶವ ಮೂರ್ತಿ.—ಅವರ ಕೈಲಿ ದುಡ್ಡು, ರಾಜ್ಯ ಎಲ್ಲವನ್ನೂ ಕೊಟ್ಟಿದ್ದೇವೆ. ಅಂದಮೇಲೆ ಒಂದು-ನಾಲ್ಕು ಮಾತುಗಳನ್ನಾದರೂ ಬೈಯ್ಯುವುದಕ್ಕೆ ವಿರೋಧ ಪಕ್ಷಕ್ಕೆ ಅವಕಾಶ ಬೇಡವೆ ?

ಶ್ರೀ ವೀರೇಂದ್ರ ಪಾಟೀಲ್.—ಇನ್ನು 1962–63ನೇ ಸಾಲಿನಲ್ಲಿ ಮೈನರ್ ಇರ್ರಿಗೇಶನ್ನಿಗೆ ಮತ್ತು ಪಬ್ಲಿಕ್ ಹೆಲ್ತ್ ಬಾಬಿಗೆ ಖರ್ಚಾಗಿರುವುದನ್ನು ಈ ಕೆಳಗಿನ ಅಂಕಿ ಅಂಶಗಳ ಮೂಲಕ ತಿಳಿಸುತ್ತೇನೆ.

		ರೂಪಾಯಿಗಳು
ಹಳೆಯ ಮೈಸೂರು	...	4,85,11,000
ಬೊಂಬಾಯಿ ಕರ್ಣಾಟಕ	...	98,90,000
ಹೈದರಾಬಾದ್ ಕರ್ಣಾಟಕ	...	21,81,000
ಮದ್ರಾಸ್ ಕರ್ಣಾಟಕ	...	38,29,000
ಒಟ್ಟು	...	6,44,11,000

ಅಂದಮೇಲೆ ಈ ಬಾಬಿನಲ್ಲಿ 6,44,11,000 ರೂಪಾಯಿಗಳು ಖರ್ಚಾಗಿವೆ. ಹಳೆಯ ಮೈಸೂರಿಗೆ ಇದರಲ್ಲಿ 4,85,11,000 ರೂಪಾಯಿಗಳು ಖರ್ಚಾಗಿವೆ.

ಇನ್ನು Roads and Buildings ಬಾಬಿನಲ್ಲಿ 1962-63ನೇ ಸಾಲಿನಲ್ಲಿ ಒಟ್ಟು 23,24,49,000 ರೂಪಾಯಿಗಳು ಖರ್ಚಾಗಿವೆ. ವಿವರಗಳು ಈ ರೀತಿ ಇವೆ :—

		ರೂಪಾಯಿಗಳು
ಹಳೆಯ ಮೈಸೂರು	...	11,50,90,000
ಬೊಂಬಾಯಿ ಕರ್ಣಾಟಕ	...	6,03,39,000
ಹೈದರಾಬಾದ್ ಕರ್ಣಾಟಕ	...	1,71,26,000
ಮದ್ರಾಸ್ ಕರ್ಣಾಟಕ	...	3,98,94,000
ಒಟ್ಟು	...	23,24,49,000

ಹೀಗೆ 1962–63ನೇ ಸಾಲಿನಲ್ಲಿ ಒಟ್ಟು 29,68,60,000 ರೂಪಾಯಿಗಳಲ್ಲಿ ಹಳೆಯ ಮೈಸೂರಿಗೆ 16,36,01,000 ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಇನ್ನು 1963-64ರಲ್ಲಿ ಏನು ಖರ್ಚುಮಾಡಿದ್ದೇವೆ, probable outlay in Irrigation and Public Health ಎಂಬುದನ್ನು ವಿಚಾರ ಮಾಡೋಣ. ಇದಕ್ಕೆ ಒಟ್ಟು ಅಂದಾಜು 5,62,42,000 ರೂಪಾಯಿಗಳು.

		ರೂಪಾಯಿಗಳು
ಹಳೆಯ ಮೈಸೂರು	...	3,76,44,000
ಬೊಂಬಾಯಿ ಕರ್ಣಾಟಕ	...	1,13,52,000
ಹೈದರಾಬಾದ್ ಕರ್ಣಾಟಕ	...	39,91,000
ಮದ್ರಾಸ್ ಕರ್ಣಾಟಕ	...	32,55,000
ಒಟ್ಟು	...	5,62,42,000

ಇನ್ನು Roads and Buildings ಮೇಲೆ ಈ ಸಾಲಿನಲ್ಲಿ ಒಟ್ಟು 23,53,10,000 ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ವಿವರಗಳು ಈರೀತಿ ಇವೆ :—

		ರೂಪಾಯಿಗಳು
ಹಳೆಯ ಮೈಸೂರು	...	10,45,11,000
ಬೊಂಬಾಯಿ ಕರ್ಣಾಟಕ	...	5,49,69,000
ಹೈದರಾಬಾದ್ ಕರ್ಣಾಟಕ	...	2,78,91,000
ಮದ್ರಾಸ್ ಕರ್ಣಾಟಕ	...	3,79,39,000
ಒಟ್ಟು	...	23,53,10,000

ಒಟ್ಟು 29,15,52,000 ರೂಪಾಯಿಗಳ ಪೈಕಿ ಹಳೆಯ ಮೈಸೂರಿಗೆ 14,21,55,000 ರೂಪಾಯಿಗಳನ್ನು 1963–64ನೇ ಸಾಲಿನಲ್ಲಿ ಖರ್ಚುಮಾಡುತ್ತಿದ್ದೇವೆ.

ಇನ್ನು 1964-65ನೇ ಸಾಲಿನಲ್ಲಿ ಇರ್ರಿಗೇಷನ್ ಮತ್ತು ಪಬ್ಲಿಕ್ ಹೆಲ್ತ್ ಬಾಬಿಗೆ ಎಷ್ಟು ಹಣವನ್ನು ಒದಗಿಸಿದ್ದೇವೆಂಬುದನ್ನು ಬಡ್ಜೆಟ್ಟಿನಲ್ಲಿ ತಿಳಿಸಿದ್ದೇವೆ. ಈ ಸಾಲಿಗೆ ಈ ಬಾಬಿಗಾಗಿ 3,39,15,000 ರೂಪಾಯಿಗಳನ್ನು ಖರ್ಚುಮಾಡಬೇಕೆಂದು ಇದ್ದೇವೆ. ವಿವರಗಳು ಈ ರೀತಿ ಇವೆ :—

		ರೂಪಾಯಿಗಳು
ಹಳೆಯ ಮೈಸೂರು	...	2,18,33,000
ಬೊಂಬಾಯಿ ಕರ್ಣಾಟಕ	...	70,36,000
ಹೈದರಾಬಾದ್ ಕರ್ಣಾಟಕ	..	25,50,000
ಮದ್ರಾಸ್ ಕರ್ಣಾಟಕ	...	24,96,000
ಒಟ್ಟು	...	3,39,15,000

ಇನ್ನು Roads and Buildings ಬಾಬಿಗೆ 1964–65ನೇ ಸಾಲಿನಲ್ಲಿ 24,47,27,000 ರೂಪಾಯಿಗಳನ್ನು ಒದಗಿಸಿದೆ. ವಿವರಗಳು ಈ ರೀತಿ ಇವೆ :—

		ರೂಪಾಯಿಗಳು
ಹಳೆಯ ಮೈಸೂರು	...	10,91,09,000
ಬೊಂಬಾಯಿ ಕರ್ಣಾಟಕ	...	6,44,12,000
ಹೈದರಾಬಾದ್ ಕರ್ಣಾಟಕ	...	3,08,26,000
ಮದ್ರಾಸ್ ಕರ್ಣಾಟಕ	...	4,03,80,000
ಒಟ್ಟು	...	24,47,27,000

ಒಟ್ಟು 1964–65ನೇ ಸಾಲಿನಲ್ಲಿ ಒದಗಿಸಿರುವ 27,86,42,000 ರೂಪಾಯಿಗಳ ಪೈಕಿ ಹಳೆಯ ಮೈಸೂರಿನಲ್ಲಿ 13,09,42,000 ರೂಪಾಯಿಗಳನ್ನು ಖರ್ಚುಮಾಡಬೇಕಾಗಿದೆ.

ಒಬ್ಬ ಮಾನ್ಯ ಸದಸ್ಯರು.—ಹೈದರಾಬಾದ್ ಕರ್ಣಾಟಕವೆಂದರೆ including ಬಳ್ಳಾರಿಯೇ ?

ಶ್ರೀ ವೀರೇಂದ್ರ ಪಾಟೀಲ್.—ಬಳ್ಳಾರಿ ಡಿವಿಜನ್ ಅದರಲ್ಲಿ ಸೇರಿಹೋಗಿದೆ. ಬಳ್ಳಾರಿಗೆ ಮಾತ್ರ ಎಷ್ಟು ಖರ್ಚಾಗುತ್ತದೆಂಬ ಬಗ್ಗೆ ಅಂಕಿ ಅಂಶಗಳನ್ನು ಲೆಕ್ಕಾಚಾರ ಮಾಡಿ ಒಂದು ನಿರ್ಣಯಕ್ಕೆ ಬರಬೇಕು.

12-00 NOON

ರೂರಲ್ ಕಮ್ಯುನಿಕೇಷನ್ ಮೇಲೆ ಏನು ಹಣವನ್ನು ನಾವು ಖರ್ಚುಮಾಡಿದ್ದೇವೆ ಎಂಬುದನ್ನು ನಾನು ಹೇಳುತ್ತೇನೆ. ಅಭಿವೃದ್ಧಿ ಹೊಂದಬೇಕಾದ್ದನ್ನು ಅಭಿವೃದ್ಧಿ ಮಾಡಿದ್ದೇವೆ. ಆ ರೀತಿ ಅಭಿವೃದ್ಧಿ ಮಾಡುವುದಕ್ಕೆ ಎಲ್ಲಿಂದ ಪ್ರಯತ್ನ ಮಾಡಿದ್ದೇವೆ, ಯಾರ ದುಡ್ಡನ್ನು ಇದರಲ್ಲಿ ಸುರಿದಿದ್ದೇವೆ ಮತ್ತು ಎಷ್ಟರಮಟ್ಟಿಗೆ ಅಭಿವೃದ್ಧಿಯಾಗಿದೆ ಎಂಬುದು ಗೊತ್ತಾಗುತ್ತದೆ. ಹಳೆಯ ಮೈಸೂರಿಗೆ ಎಷ್ಟರ

(ಶ್ರೀ ವೀರೇಂದ್ರ ಪಾಟೀಲ್)

ಮಟ್ಟಿಗೆ ದುಡ್ಡನ್ನು ಸುರಿದಿದ್ದೇವೆ ಎಂಬುದು ಗೊತ್ತಾಗುತ್ತದೆ. ಈ ಕೆಳಗೆ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ನೋಡಿದರೆ ಮಾನ್ಯ ಸದಸ್ಯರಿಗೆ ಎಲ್ಲಾ ವಿಚಾರವೂ ಗೊತ್ತಾಗುತ್ತವೆ. ಅಭಿವೃದ್ಧಿ ಕಾರ್ಯಗಳ ಬಗ್ಗೆ ಸರ್ಕಾರದವರು ಖರ್ಚು ಮಾಡಿರುವುದು ಈ ರೀತಿ ಇದೆ :—

Rural Communications: 12,726-6 furlongs, tackled. Mileage completed—9,762—2 furlongs. Out of this, area-wise figures are like this:

		Miles—furlongs
Old Mysore	...	8,700—6
Bombay Karnataka	...	1,928—5
South Kanara including Coorg	...	1,043—0
Hyderabad Karnataka	...	1,054—3

Mileage completed:

Old Mysore	...	7,094—2
Bombay Karnataka	...	1,084—5
South Kanara including Coorg	...	914—6
Hyderabad Karnataka	...	658—5

Up to 31-3-1963 the amount spent on rural communication is Rs. 5,06,76,000. Out of this:

		Rs.
Old Mysore	...	2,97,71,000
Bombay Karnataka	...	1,04,79,000
South Kanara	...	66,10,000
Hyderabad Karnataka	...	38,25,000

D.L.B. Roads—total mileage 7,526, during the years 1959 to 1961. Out of this:

		Miles—furlongs	
Old Mysore	...	4056	5
Bombay Karnataka	...	2253	5
Hyderabad Karnataka	...	574	7
South Kanara	...	472	3
Coorg	...	169	1

After I assumed charge the mileage tackled is: 999—4. Out of this:

Old Mysore	...	380	2
Bombay Karnataka	...	297	2
Hyderabad Karnataka	...	191	1
South Kanara	...	69	7
Coorg	...	11	0

Minor Irrigation—The amount spent during the Second Five-Year Plan—Rs. 6,73,72,000. Out of this:

		Rs.
Old Mysore	...	4,92,21,000
Bombay Karnataka	...	1,34,92,000
Hyderabad Karnataka	...	18,88,000
South Kanara	...	13,36,000
Coorg	...	14,35,000

The Irrigation percentage for the respective regions is as follows ;

Old Mysore	...	13.14
Bombay Karnataka	...	3.35
Hyderabad	...	0.73
South Kanara	...	20.43
Coorg	...	8.67

During these two years, minor irrigation—1962-63 on plan schemes : amount spent—2,45,59,000. Area-wise it is as follows :

		Rs.
Old Mysore	...	1,76,15,000
Bombay Karnataka	...	49,65,000
Raichur including Bellary	...	13,88,000
Special West Coast circle including Coorg		5,91,000

For 1963-64 the probable outlay on plan schemes as well as repairs on irrigation works : 4,41,77,100.

Old Mysore area	...	3,08,82,700
Bombay Karnataka	...	86,45,600
Hyderabad Karnataka	...	37,44,300
South Kanara	...	6,07,300
Coorg	...	2,97,200

In my own constituency—Chincholi—there are barely 9 miles of P.W.D. roads. One must pass through 35 miles of Andhra Pradesh before reaching the place.

Rural Communication in Chinchol Taluka	mileage tackled 43 miles mileage completed 9.1 miles

whereas in Gubbi, which was once the constituency of my friend Sri Muckannappa : there is maximum effort under rural communication : Mileage tackled is 467.6 miles. In Sira taluka which is the aera represented by Sri Muckannappa at present—it is 284-3 tackled and 284-3 completed.

Mr. SPEAKER.—Before we proceed further, I would like to know how did you achieve it ?

ಶ್ರೀ ಎಸ್. ಎಂ. ಗುರೆಡ್ಡಿ (ಮುದ್ದೇ ಬಿಹಾಳ್).—ಯಾರು ಹೆಚ್ಚು ಒದರುತ್ತಾರೆಯೋ ಅವರಿಗೆ ಹೆಚ್ಚು ಕೊಡುತ್ತೀರಾ ಎಂದು ಗೊತ್ತಾಯಿತು. ಹಾಗಾದರೆ ಇನ್ನು ಮೇಲೆ ನಾವು ಹೆಚ್ಚು ಒದರುತ್ತೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನಗೆ ಗುಬ್ಬಿ ತಾಲ್ಲೂಕಿನಲ್ಲಿ ಸೇರಿದ್ದು ಒಂದೇ ಹೋಬಳಿ. ಆ ಹೋಬಳಿಯಲ್ಲಿ ಎಷ್ಟು ಮಾಡಿದ್ದೀರೆಂಬುದನ್ನು ಹೇಳಿ.

ಶ್ರೀ ವೀರೇಂದ್ರ ಪಾಟೀಲ್.—ಅದಕ್ಕೇ ಬೇರೆ ಪ್ರತ್ಯೇಕವಾದ ಒಂದು ಪ್ರಶ್ನೆಯನ್ನು ಹಾಕಿದರೆ ಅದನ್ನು ಹೇಳುತ್ತೇನೆ. ಈ ಅಂಕಿ ಸಂಖ್ಯೆಗಳಿಂದ ರಾಜ್ಯದಲ್ಲಿ ರೋಡ್ ಡೆವಲಪ್‌ಮೆಂಟ್ ಸ್ಟೇಟ್ ಅವರೇಜ್ ನೂರು ಚದುರ ಮೈಲಿಗೆ 40 ಮೈಲಿ ಬರುತ್ತದೆ. ಆದರೆ ಹೈದರಬಾದು ಕರ್ಣಾಟಕದಲ್ಲಿ 12 ಮೈಲಿ ಬರುತ್ತದೆ. ಇದರಿಂದ ಎಲ್ಲ ಭಾಗಗಳಲ್ಲಿಯೂ ಪರಿಸ್ಥಿತಿ ಏನಿದೆ ಎನ್ನುವುದು ಗೊತ್ತಾಗುತ್ತದೆ.

ಶ್ರೀ ಎಸ್. ಶಿವಪ್ಪ.—ನಿಜಾಮರು ಮಾಡಿದ ಪಾಪಕ್ಕೆ ಯಾರು ಹೊಣೆ ? ಅದಕ್ಕೆ ನಮ್ಮನ್ನೇಕೆ ಹೊಣೆ ಮಾಡುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಅವರನ್ನು ಹಾಗೆಯೇ ಅಲ್ಲಿಯೇ ಬಿಡೋಣ ಎಂದು ಹೇಳುತ್ತೀರೇನು ?

ಈಗ ಎಲ್ಲ ಏರಿಯಾಗಳಲ್ಲಿಯೂ ಒಂದೊಂದು ಸಮಸ್ಯೆ ಇದೆ. ಪಬ್ಲಿಕ್‌ವರ್ಕ್ಸ್ ಖಾತೆಯ ಸಮಸ್ಯೆಗಳನ್ನು ಹೇಳಬೇಕಾದರೆ ಹೈದರಾಬಾದು ಕರ್ಣಾಟಕದಲ್ಲಿ ರಸ್ತೆಗಳು ಬಹಳ ಕಡಮೆ. ಅಲ್ಲಿನ ಕೆಲವು ರಸ್ತೆಗಳಿಗೆ ಸೇತುವೆಗಳಿಲ್ಲ. ಅನೇಕ ಕಡೆ ತಾಲ್ಲೂಕು ಹೆಡಕ್ವಾರ್ಟರು ಮುಟ್ಟುವುದಕ್ಕೆ ಬಹಳ ಕಷ್ಟವಿದೆ. ಒಬ್ಬ ಮಾನ್ಯ ಸದಸ್ಯರು ಯಲಬುರ್ಗದಿಂದ ಬಂದವರಿದ್ದಾರೆ. ಅವರು ಎದುರು ಪಕ್ಷಕ್ಕೆ ಸೇರಿದವರು. ಅವರ ಸ್ಥಿತಿ ಹೇಗಿದೆ ಎಂದರೆ ವರ್ಷದಲ್ಲಿ ನಾಲ್ಕು ತಿಂಗಳ ಕಾಲ ಸ್ವಾತಂತ್ರ್ಯವನ್ನು ಘೋಷಣೆ ಮಾಡಬಹುದು. ಅಲ್ಲಿಗೆ ಹೋಗುವುದಕ್ಕೇ ಸಾಧ್ಯವಿಲ್ಲ. ಇಲ್ಲಿಯವರೆಗೂ ಯಾವ ಸೇತುವೆಗಳನ್ನೂ ಕಟ್ಟಿಲ್ಲ. 1,25,00,000 ರೂಪಾಯಿಗಳನ್ನು ಸೇತುವೆಗಳಿಗಾಗಿ ಕೊಡುವುದರಲ್ಲಿ 8 ಲಕ್ಷ ರೂಪಾಯಿ ಇಲ್ಲಿಗೆ ಹಾಕಿದ್ದೇವೆ. ಕೆಲವು ರಸ್ತೆಗಳಿವೆ. ಆದರೆ ಒಳ್ಳೆಯ ರಸ್ತೆಗಳಿಲ್ಲ. ಅಲ್ಲಿ ರಸ್ತೆಗಳು ಮತ್ತು ಸೇತುವೆಗಳು ಹೆಚ್ಚಬೇಕು. ಬೊಂಬಾಯಿ ಕರ್ಣಾಟಕದ ಪರಿಸ್ಥಿತಿ ಏನು ಎಂದರೆ ಅಲ್ಲಿ ರಸ್ತೆಗಳಿವೆ, ಸೇತುವೆಗಳಿಲ್ಲ. ಅಲ್ಲಿ ದೊಡ್ಡ ದೊಡ್ಡ ನದಿಗಳು ಹರಿಯುತ್ತವೆ. ವರದ, ಮಲಪ್ರಭಾ, ಘಟಪ್ರಭಾ, ಕೃಷ್ಣ ಈ ಯಾವ ನದಿಗಳಿಗೂ ಕೂಡ ಸೇತುವೆಗಳಿಲ್ಲ. ಎಲ್ಲ ಕಡೆಯೂ ಕಾಸವೇಗಳನ್ನು ಕಟ್ಟಿದ್ದಾರೆ. ಕೃಷ್ಣ ನದಿಯ ಮೇಲೆ ಕಾಸವೇ ಕಟ್ಟಿದ್ದಾರೆಂದರೆ ಅಲ್ಲಿಯ ಸ್ಥಿತಿಯನ್ನು ತಾವುಗಳೇ ಯೋಚನೆ ಮಾಡಬೇಕು. ಬಿಜಾಪುರಕ್ಕೆ ಹೋಗಬೇಕು ಎಂದರೆ ಎಷ್ಟೋ ಸಲ ಸಾಧ್ಯವಾಗುವುದಿಲ್ಲ. ಅಂಥ ಸ್ಥಿತಿ ಅಲ್ಲಿದೆ. ಕೊಡತ್ತಿ, ಕೊಲ್ಲಿರ್ ಈ ಎರಡು ಸ್ಥಳಗಳಲ್ಲಿ ಕಾಸವೇಯನ್ನು ಕಟ್ಟಿದ್ದಾರೆ. ಅಲ್ಲಿ ಕುಳಿತು ಕಾಲು ಕೆಳಗೆ ಬಿಟ್ಟರೆ ನೀರು ಹತ್ತುತ್ತದೆ. ಈಗಲೇ ಹೀಗಿರಬೇಕಾದರೆ ಮಳೆಗಾಲದಲ್ಲಿ ಹೇಗಿರುತ್ತದೆ ಎನ್ನುವುದನ್ನು ವಿಚಾರ ಮಾಡಬೇಕು. ಉತ್ತರ ಕರ್ಣಾಟಕದಲ್ಲಿ ಒಂದೊಂದು ಸೇತುವೆಯನ್ನು ಕಟ್ಟಬೇಕಾದರೆ 8--9 ಲಕ್ಷ ರೂಪಾಯಿ ನಮಗೆ ಬೇಕಾಗುತ್ತದೆ. ಒಬ್ಬ ತನ್ನ ಮನೆಯಿಂದ ತಾಲ್ಲೂಕು ಅಥವಾ ಜಿಲ್ಲಾ ಮುಖ್ಯ ಸ್ಥಳಕ್ಕೆ ಹೋಗಬೇಕಾದರೆ ಸೇತುವೆಗಳನ್ನು ಕಟ್ಟಿಲ್ಲ ಎಂದು ಹೇಳಿದಾಗ ನಾವು ಅಲ್ಲಿ ಸೇತುವೆಗಳನ್ನು ಕಟ್ಟಬೇಕೋ ಇಲ್ಲವೋ ? ಇದೇ ರೀತಿ ಅನೇಕ ಕಡೆ ಇದೆ. ಕೃಷ್ಣ, ಮಲಪ್ರಭಾ, ಘಟಪ್ರಭಾ, ವರದ, ಕುಮುದ್ವತಿ, ಹೀಗೆ ಎಷ್ಟೋ ನದಿಗಳು ಅಲ್ಲಿ ಹರಿಯುತ್ತವೆ. ಅವೆಲ್ಲದರ ಮೇಲೂ ಸೇತುವೆಗಳನ್ನು ಕಟ್ಟಿಲ್ಲ. ಒಂದೊಂದು ಸೇತುವೆಯನ್ನು ಈ ದೊಡ್ಡ ನದಿಗಳ ಮೇಲೆ ಕಟ್ಟಬೇಕಾದರೆ 15 ಲಕ್ಷ, 20 ಲಕ್ಷದಿಂದ ಒಂದು ಕೋಟಿ ರೂಪಾಯಿವರೆಗೂ ಬೇಕಾಗುತ್ತದೆ. ಆದಕ್ಕೆ ನಮ್ಮ ಹತ್ತಿರ ದುಡ್ಡು ಇಲ್ಲ. ಹಳೆಯ ಮೈಸೂರಿನ ಭಾಗದಲ್ಲಿ ತೆಗೆದುಕೊಂಡರೆ ಬಂಡಿ, ಚಕ್ಕಡಿ ಹೋಗುವಂತೆ ರಸ್ತೆಗಳನ್ನು ಮಾಡಿದ್ದಾರೆ. ಪ್ರತಿಯೊಂದು ಫರ್ಲಾಂಗ್, ಎರಡು ಫರ್ಲಾಂಗ್‌ಗಳಿಗೆ ಒಂದೊಂದು ತಿರುವು ಇದೆ. ನೇರವಾದ ರಸ್ತೆಗಳಿಲ್ಲವೇ ಇಲ್ಲ. ಶ್ರೀಮಾನ ಕೇಶವ ಮೂರ್ತಿಗಳು ಹೇಳುತ್ತಿದ್ದರು, ಮಾಸ್ಕೊದಿಂದ ಲೆನಿನಗ್ರಾಡಿಗೆ ಇರುವಂತೆ ನೇರವಾದ ಮತ್ತು ಉದ್ದವಾದ ರಸ್ತೆಗಳಿರಬೇಕು ಎಂದು. ನಾನೂ ಅದನ್ನು ಒಪ್ಪುತ್ತೇನೆ. ರಸ್ತೆಯನ್ನು ಮಾಡಬೇಕಾದರೆ ನೇರವಾಗಿರುವಂತೆ ಮಾಡಬೇಕು. ಆದರೆ ಹಿಂದೆ ಹಾಗೆ ಮಾಡದೆ ಇರುವುದರಿಂದ ಈಗ ಅದನ್ನೆಲ್ಲ ಸರಿಪಡಿಸಬೇಕೆಂದರೆ ಬಹಳ ಕಷ್ಟವಿದೆ ಮತ್ತು ಹೆಚ್ಚು ಖರ್ಚಾಗುತ್ತದೆ. ಮಲೆನಾಡಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಸೇತುವೆಗಳಿಲ್ಲ. ಅಲ್ಲಿ ಸೇತುವೆಗಳನ್ನು ಮಾಡಬೇಕಾಗಿದೆ. ತಿರುವುಗಳನ್ನು ನೇರವಾಗಿ ಮಾಡುವುದು ದೊಡ್ಡ ಪ್ರಶ್ನೆಯಾಗಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ತಮ್ಮ ಮುಂದೆ ನಾನು ಹೇಳಬಯಸುತ್ತೇನೆ. ಇಲ್ಲಿಯವರೆಗೂ ಆಗಿರುವ ಪ್ರಗತಿಯ ಬಗ್ಗೆ ನಾನು ಹೇಳಿದೆ. ಈಗ ಅನೇಕ ಮಾನ್ಯ ಸದಸ್ಯರು ಕೆಲವು ವಿಚಾರಗಳನ್ನು ಹೇಳಿದ್ದಾರೆ.

ನ್ಯಾಷನಲ್ ಹೈವೇ ನಂಬರ್ 13 — ಚಿತ್ರದುರ್ಗದಿಂದ ಷೋಲಾಪುರಕ್ಕೆ ಹೋಗುವ ರಸ್ತೆಯನ್ನು ಮೂರನೆಯ ಯೋಜನೆಯಲ್ಲಿ ತೆಗೆದುಕೊಳ್ಳಲು ತುರ್ತು ಪರಿಸ್ಥಿತಿಗೆ ತುತ್ತಾಗುವ ಸಂಭವ ಇದೆ ಎಂದು ಹೋದ ಸಲ ಹೇಳಿದೆ. ಈ ಸಂದರ್ಭದಲ್ಲಿ ಸಂತೋಷದಿಂದ ಹೇಳುವುದೇನೆಂದರೆ ಇವತ್ತು ಆ ರಸ್ತೆಯ ಬಗ್ಗೆ ಏನು ಕನಸು ಇತ್ತು ಅದು ನನಸಾಗುವ ಕಾಲ ಬಂದಿದೆ. ಆ ಸಂಬಂಧದಲ್ಲಿ ಅನೇಕ ಅಂದಾಜುಗಳು ಮಂಜೂರಾಗಿ ಡೋಣಿ ನದಿಗೆ ಸೇತುವೆಯನ್ನು ಕಟ್ಟುವುದು, ಹೊಸಪೇಟೆ ಹತ್ತಿರ ತುಂಗಭದ್ರ ನದಿಗೆ ಸೇತುವೆಯನ್ನು ಹಾಕುವುದು ಈ ಕೆಲಸಕಾರ್ಯಗಳು ಮಂಜೂರಾಗಿವೆ. ಅದಕ್ಕೆ ಟೆಂಡರುಗಳನ್ನು ಕರೆದಿದ್ದೇವೆ. ಕೆಲಸ ಕೂಡಲೇ ಪ್ರಾರಂಭವಾಗುತ್ತದೆ ಎಂದು ಹೇಳಬಯಸುತ್ತೇನೆ.

ಕ್ವಾಲಿಟಿ ಆಫ್ ವರ್ಕ್ ಬಗ್ಗೆ ಅನೇಕ ಸದಸ್ಯರು ಹೇಳಿದ್ದಾರೆ. ಅದನ್ನು ನಾವೂ ತೀಕ್ಷ್ಣವಾಗಿ ವಿಚಾರ ಮಾಡುತ್ತಿದ್ದೇವೆ. ನಮ್ಮ ದೇಶದಲ್ಲಿ ಇವತ್ತು ಮಾಸ ಪ್ರೊಡಕ್ಷನ್ ಆಗುತ್ತಿರುವಾಗ ಕ್ವಾಲಿಟಿ ಅಷ್ಟಾಗಿ ಇರುವುದಿಲ್ಲ ಎನ್ನುವುದು ತಮಗೆಲ್ಲರಿಗೂ ಗೊತ್ತಿರುವ ವಿಚಾರ. ಮಾನ್ಯ ಕೃಷ್ಣ ಶೆಟ್ಟರೂ ಮತ್ತು ಕೆಲವರೂ ಹೇಳಿದರು ಕಂಟ್ರಾಕ್ಟ್ ಕೊಡುವ ಪದ್ಧತಿಯನ್ನು ಬಿಡಿ ಎಂದು. ಹಾಗೆ ಮಾಡಿದರೆ ನಾವು ಇಲಾಖೆಯ ಮುಖಾಂತರವಾಗಿ ಮಾಡಬೇಕಾಗುತ್ತದೆ ಅಥವಾ ಅದಕ್ಕೆ ಒಂದು ಕಾರ್ಪೊ

ರೇಷನ್ ರಚಿಸಬೇಕಾಗುತ್ತದೆ. ಒಂದು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಮಾಡತಕ್ಕ ವಿಷಯವನ್ನು ಈ ಗಾಗಲೇ ವಿಚಾರ ಮಾಡುತ್ತಿದ್ದೇವೆ.

ಶ್ರೀ ಎಸ್. ಶಿವಪ್ಪ.—ಕಾರ್ಪೊರೇಷನ್ ಬೇಡ. ಅದಕ್ಕೆ ಒಬ್ಬ ಚೇರ್‌ಮನ್ ಮೆಂಬರುಗಳು ನೇಮಿಸುವುದೂ ಬೇಡ. ಇದುವರೆಗೂ ನಮಗೆ ಆಗಿರುವ ಅನುಭವವೇ ಸಾಕು.

ಶ್ರೀ ವೀರೇಂದ್ರ ಪಾಟೀಲ್.—ಇಲಾಖೆಯಿಂದ ಕೆಲಸ ಮಾಡಿಸಬೇಕು ಎಂದರೆ ನಮಗೆ ಸಕಾಲ ದಲ್ಲಿ ಸಾಮಾನುಗಳು ಸಿಕ್ಕುವ ಹಾಗೆ ಇಲ್ಲ. ಒಂದು ಪದಾರ್ಥವನ್ನು ತೆಗೆದುಕೊಳ್ಳಬೇಕಾದರೆ ಸ್ಟೋರ್ಸ್ ಪರ್ಚೇಸ್ ಕಮಿಟಿಗೆ ಹೋಗಬೇಕು, ಹಣಕಾಸಿನ ಇಲಾಖೆಗೆ ಹೋಗಬೇಕು. ಹೀಗೆ ಓಡಾಡುವುದರಲ್ಲಿಯೇ ಸಮಯವೆಲ್ಲ ಹೋಗುತ್ತದೆ. ಅದಷ್ಟು ತೀವ್ರ ಪ್ರಗತಿಯನ್ನು ಸಾಧಿಸಬೇಕಾ ದರೆ ಅದರ ಸಲುವಾಗಿ ಕಂಟ್ರಾಕ್ಟಿಗೆ ಕೊಡಬೇಕಾಗಿಲ್ಲ ನಾವೇ ಅದನ್ನೆಲ್ಲ ಮಾಡಬೇಕು ಎಂದು ಹೇಳು ವಾಗ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಈಗ ಏನು ಸಿಬ್ಬಂದಿ ಇದೆಯೋ ಅದಕ್ಕೆ ಮೂರು ಪಟ್ಟು ಹೆಚ್ಚಾಗಬೇಕು. ಇವತ್ತು ಏನು ಯಂತ್ರೋಪಕರಣಗಳಿವೆಯೋ ಅದಕ್ಕೆ ಎಷ್ಟೋ ಪಟ್ಟು ಹೆಚ್ಚು ಮಾಡಬೇಕಾಗಿದೆ ಎನ್ನುವುದನ್ನು ಹೇಳಬೇಕಾಗಿದೆ.

ಕೆಲಸದ ಕ್ವಾಲಿಟಿ ಯಾವರೀತಿ ಕಂಟ್ರೋಲ್ ಮಾಡಬೇಕು ಎನ್ನುವ ಪ್ರಶ್ನೆ ನಾನಾಗಲೇ ಹೇಳಿ ದಂತೆ ಈಗ ಮಾಸ್ ಪ್ರೊಡಕ್ಷನ್ ಆಗುತ್ತಿದೆ. ಅಲ್ಲಲ್ಲಿ ನಮಗೆ ಕಾಣುವುದು ಮತ್ತು ನಾವು ಹೇಳು ವುದು; ಕಟ್ಟಿದ ಕಟ್ಟಡಗಳು ಸೋರುತ್ತಿವೆ, ಕಟ್ಟಡಗಳು ಬೀಳುತ್ತಿವೆ ಎಂದು. ಇದು ನಮ್ಮ ಗಮನಕ್ಕೂ ಬಂದಿದೆ. ಕ್ವಾಲಿಟಿ ಕಂಟ್ರೋಲ್ ಮಾಡಿದ್ದೇವೆ ಎಂದು ನಾನು ತಮ್ಮ ಮುಂದೆ ಹೇಳು ತ್ತಿಲ್ಲ. ಪಬ್ಲಿಕ್ ವರ್ಕ್ಸ್ ಖಾತೆಯಲ್ಲಿ ಎಲ್ಲ ಸರಿಯಾಗಿದೆ, ಅಲ್ಲಿರುವವರೆಲ್ಲರೂ ದೇವತೆಗಳು, ಯಾರೂ ತಪ್ಪು ಮಾಡುವುದಿಲ್ಲ, ಮಾಡಿಲ್ಲ ಎಂದು ಹೇಳುತ್ತಿಲ್ಲ. ಅಲ್ಲ ತಪ್ಪುಗಳಿರಬಹುದು. ಅದನ್ನು ಕಂಡು ಹಿಡಿಯ ಬೇಕಾದರೆ, ಮುಂದೆ ಆ ರೀತಿ ಆಗದಂತೆ ನೋಡಿಕೊಳ್ಳಬೇಕಾದರೆ ಜನಸಾಮಾನ್ಯರ ಸಹ ಕಾರ ಬೇಕಾಗುತ್ತದೆ, ವಿಶೇಷವಾಗಿ ತಮ್ಮ ಸಹಕಾರ ಬೇಕಾಗುತ್ತದೆ. ಇದಕ್ಕೆ ಒಂದು ನಿದರ್ಶನ ವನ್ನು ಕೊಡುತ್ತೇನೆ. ಡಿವಿಜನಲ್ ಸ್ಟೋರ್ಸ್‌ನಲ್ಲಿ ಇವತ್ತು ಕೆಲವು ಮಟ್ಟಿಗೆ mis management ನಡೆದಿದೆ ಎಂದು ನಮ್ಮ ಗಮನಕ್ಕೆ ಒಬ್ಬ ಮಾನ್ಯ ಸದಸ್ಯರು ತಂದರು. ಅಲ್ಲಿ ಮೂರು ಲಕ್ಷ ರೂಪಾಯಿನಷ್ಟು ದುರ್ವ್ಯವಹಾರ ನಡೆದಿದೆ ಎಂದು ಅವರು ಹೇಳಿದರು. ನಾನು ಅದನ್ನು ವಿಚಾರ ಮಾಡಿಸುತ್ತೇನೆ, ನೀವು ಬರೆದು ಕೊಡಿರಿ ಎಂದರೆ ಅವರು ಪುನಃ ಬರಲೇ ಇಲ್ಲ. ಇನ್ನೊಬ್ಬ ಸದಸ್ಯರು ಬಂದು ಈ ರೀತಿ ಆಗಿದೆ, ಕಣ್ಣು ಮುಚ್ಚಿ ಕುಳಿತಿದ್ದೀರಿ ಎಲ್ಲಿಯವರೆಗೂ ಹೀಗೆ ಬಿಡುತ್ತೀರಿ ಎಂದು ಹೇಳಿದರು. ಅಲ್ಲಿ ಏನಾಗಿದೆ ಎನ್ನುವುದನ್ನು ಒಂದು ಕಾಗದದಲ್ಲಿ ನಿಮ್ಮ ಹೆಸರು ಹಾಕದೆ ಕೊಡಿ, ನನಗೆ ಏನಾಗಿದೆ ಎನ್ನುವುದು ಗೊತ್ತಾಗಬೇಕು. ಬರೆದು ಕೊಡಲು ಇಷ್ಟವಿಲ್ಲದೆ ಇದ್ದರೆ ಒಂದು ಕಾಗದದಲ್ಲಿ ಟೈಪು ಮಾಡಿಸಿ ಕೊಡಿರಿ ಎಂದು ಹೇಳಿದೆ. ಅವರು ಕೊಡಲಿಲ್ಲ. ಕೊನೆಗೆ ನಾನೇ ಒಂದು ಮಿನಿಟ್ ಬರೆದು ಅದನ್ನು ಇನ್‌ವೆಸ್ಟಿಗೇಟ್ ಮಾಡಿಸಿದೆ. ಅದರಲ್ಲಿ ಮೂರು ಲಕ್ಷಕ್ಕೆ ಮೇಲ್ಪಟ್ಟು ದುರುಪಯೋಗವಾಗಿದೆ ಎನ್ನುವುದು ಕಂಡುಬಂದು ತೀವ್ರವಾದ ತನಿಖೆ ನಡೆಯುತ್ತಿದೆ. ಎಲ್ಲಿ ಕ್ವಾಲಿಟಿ ಸರಿಯಾಗಿರುವುದಿಲ್ಲವೋ ಅಲ್ಲಿ ಬಹುಶಃ ಇಂಜಿನಿಯರು ಮತ್ತು ಕಂಟ್ರಾಕ್ಟರು ಇವರಿಬ್ಬರ ಕೈವಾಡವೂ ಇರುತ್ತದೆ. ಇದನ್ನೆಲ್ಲ ಜನ ನೋಡುತ್ತ ಕುಳಿತುಕೊಂಡರೆ, ಕಣ್ಣು ಮುಚ್ಚಿ ಕುಳಿತು ಕೊಂಡರೆ ನಾನು ಇಲ್ಲಿ ವಿಧಾನಸೌಧದಲ್ಲಿ ಕುಳಿತುಕೊಂಡು ಏನೂ ಮಾಡುವುದಕ್ಕಾಗುವುದಿಲ್ಲ.

ಈಗ ಕ್ವಾಲಿಟಿ ಕಂಟ್ರೋಲ್ ಮಾಡಬೇಕು, ಕ್ವಾಲಿಟಿ ಚೆನ್ನಾಗಿರಬೇಕು, ಎಂದು ಹೇಳುವಾಗ ಮಾಸ್ ಪ್ರೊಡಕ್ಷನ್ ಆಗುವಾಗ ಯಾವ ರೀತಿಯಿಂದ ಮಾಡಲಿಕ್ಕೆ ಸಾಧ್ಯ ಎನ್ನುವುದನ್ನು ಯೋಚನೆ ಮಾಡಬೇಕು. ಹಿಂದೆ ಇಟ್ಟಿಗೆಗಳ ಕ್ವಾಲಿಟಿ ಏನಿತ್ತು ಆ ಕ್ವಾಲಿಟಿ ಈಗ ಇಲ್ಲ. ಕೆಳಗೆ ಹಾಕಿದರೆ ಪುಡಿ ಪುಡಿಯಾಗುತ್ತದೆ. ಅದೇ ಇಟ್ಟಿಗೆಯನ್ನೇ ಎಲ್ಲರೂ ಉಪಯೋಗ ಮಾಡುತ್ತಿದ್ದಾರೆ. ಅದಕ್ಕೆ ಇರುವ ಬೇಡಿಕೆಗಿಂತ ಉತ್ಪಾದನೆ ಕಡಿಮೆಯಾಗಿದೆ. ಅದೇ ರೀತಿ ಸುಣ್ಣವೂ ಚೆನ್ನಾಗಿರುವುದಿಲ್ಲ. ನಾನು ಮನೆ ಕಟ್ಟಬೇಕಾದರೂ ಅದನ್ನೇ ಉಪಯೋಗ ಮಾಡಬೇಕು. ಅದನ್ನು ಬಿಟ್ಟರೆ ಬೇರೆ ಸಿಕ್ಕುವ ಹಾಗೆಯೇ ಇಲ್ಲ. ಇಂಥ ಪರಿಸ್ಥಿತಿ ಬಂದಿದೆ. ಇಲಾಖೆಯಿಂದ ನಾವೇ ಇಟ್ಟಿಗೆಯನ್ನು ಸುಡಬೇಕು, ಸುಣ್ಣವನ್ನು ಮಾಡಿಕೊಳ್ಳಬೇಕು ಎನ್ನುವುದು ನಮ್ಮ ಮುಂದೆ ಇರುವ ವಿಷಯ. ಈಗ ಶರಾವತಿಯಲ್ಲಿ ನಾವೇ ಸುರ್ಕಿ ಮಾರ್ಟರ್, ಲೈಮ್ ಮಾರ್ಟರ್ ಇವುಗಳನ್ನು ಮಾಡಿಕೊಡುತ್ತಿದ್ದೇವೆ. ದೊಡ್ಡ ಕೆಲಸಗಳನ್ನು ತೆಗೆದ ಕೊಳ್ಳುವಾಗ ಇದನ್ನೆಲ್ಲ ಮಾಡಬಹುದು. ಆದರೆ ಸಣ್ಣ ಪುಟ್ಟ ಕೆಲಸಗಳಿಗೆ ಹಾಗೆ ಮಾಡುವುದಕ್ಕಾಗುವುದಿಲ್ಲ. ಈ ರೀತಿ ಕಂಟ್ರಾಕ್ಟರ್ ಮತ್ತು ನಮ್ಮ ಅಧಿಕಾರಿಗಳ ಕೈವಾಡ ದಿಂದ ಕ್ವಾಲಿಟಿ ಕೆಡುತ್ತದೆ. ಆ ರೀತಿಯ ದೂರುಗಳು ಬಂದಾಗ ಅದನ್ನೆಲ್ಲ ತನಿಖೆ ಮಾಡಬೇಕು ಎನ್ನುವುದಕ್ಕೆ ಒಂದು ಟೆಕ್ನಿಕಲ್ ಆಡಿಟ್ ಸೆಲ್ ಮಾಡಿಕೊಂಡಿದ್ದೇವೆ. ಅದು ಲಂಚನಿರೋಧ ಶಾಖೆಯ ಅಧೀನದಲ್ಲಿತ್ತು. ಅದನ್ನು ಈಗ ನಮ್ಮ ಕೈಕೆಳಗೆ ತೆಗೆದುಕೊಂಡಿದ್ದೇವೆ.

(ಶ್ರೀ ವೀರೇಂದ್ರ ಪಾಟೀಲ್)

ಟೆಕ್ನಿಕಲ್ ಆಡಿಟ್ ಸೆಲ್ ಎಂಬುದನ್ನು ಇನ್ನೂ ಹೆಚ್ಚು ಮಾಡಬೇಕೆಂದು ಅದಕ್ಕೆ ಈಗಾಗಲೇ ಒಬ್ಬರು ಸೂಪರಿಂಡೆಂಡಿಂಗ್ ಇಂಜಿನಿಯರನ್ನು ನೇಮಿಸಲಾಗಿದೆ; ಮೊನ್ನೆ ತಾನೆ ಒಬ್ಬರು ಎಗ್ಸಿಕ್ಯೂಟಿವ್ ಇಂಜಿನಿಯರನ್ನು ಕೂಡ ಕೊಟ್ಟಿದ್ದೇವೆ. ಹಿಂದೆ ಅಲ್ಲಿ ಅಸಿಸ್ಟೆಂಟ್ ಇಂಜಿನಿಯರು ಮತ್ತು ಜೂನಿಯರು ಮಾತ್ರ ಇದ್ದರು. ಈ ಟೆಕ್ನಿಕಲ್ ಆಡಿಟ್ ಸೆಲ್‌ನಲ್ಲಿ ಯಾವ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೋ ಅವರ ಚರಿತ್ರೆಯನ್ನು ತಿಳಿದು ಕೊಂಡರೆ, ಏನೋ ಜನರ ಕಣ್ಣೊರೆಸು ವುದಕ್ಕೆ ಇದನ್ನು ಮಾಡಿದ್ದೇವೆಂದು ಯಾರೂ ಹೇಳುವುದಿಲ್ಲ. ನಿಮಗೆ ಅಗತ್ಯವಾದ ಜೀಪ್, ವ್ಯಾನು ಏನು ಬೇಕಾದರೂ ತೆಗೆದುಕೊಳ್ಳಿ, ಚೆನ್ನಾಗಿ ಕೆಲಸ ಮಾಡಿ ಎಂದು ಅವರಿಗೆ ಹೇಳಿದ್ದೇವೆ, ಅವರು ಕೆಲಸ ಮಾಡುತ್ತಿದ್ದಾರೆ. ಈ ಟೆಕ್ನಿಕಲ್ ಆಡಿಟ್ ಸೆಲ್ ನಮ್ಮ ಕಡೆ ಬಂದ ಮೇಲೆ ಇವರು 75 ಕೇಸು ಗಳನ್ನು ರಿಜಿಸ್ಟರ್ ಮಾಡಿ ಅದರಲ್ಲಿ 46 ತೀರ್ಮಾನವಾಗಿ, 29 ಕೇಸುಗಳು ಪೆಂಡಿಂಗ್ ಆಗಿವೆ. ಎಲ್ಲಿ ಕೆಲಸದಲ್ಲಿ ಗುಣ ಕಡಿಮೆಯಾಗಿದೆ ಎಂಬುದರ ಬಗ್ಗೆ ಮಾನ್ಯ ಸದಸ್ಯರು ನನಗೆ ಒಂದು ಚೀಟಿ ಬರೆದು ಕೊಡಲಿ, ಅದರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳದಿದ್ದರೆ ನಾನು ಯಾವ ಶಿಕ್ಷೆಗೆ ಬೇಕಾದರೂ ಗುರಿ ಯಾಗಲು ಸಿದ್ಧವಾಗಿದ್ದೇನೆ. ಎಲ್ಲಿಯವರೆಗೂ ಮೂರನೆಯವರು ತಮ್ಮ ಗಮನಕ್ಕೆ ಬಂದ ವಿಚಾರ ಗಳನ್ನು ಸರಕಾರಕ್ಕೆ ತಿಳಿಸುವುದಿಲ್ಲವೋ ಅಲ್ಲಿಯವರೆಗೆ ಸರಿಮಾಡುವುದಕ್ಕೆ ಸಾಧ್ಯವಾಗುವುದಿಲ್ಲ.

ಇನ್ನು ಮೆಷಿನರಿ ಸಲುವಾಗಿ ಹೇಳುವುದಾದರೆ, ನಮ್ಮಲ್ಲಿ ಸಾಕಷ್ಟು ಮೆಷಿನರಿ ಇವೆ. ಸಕಾಲ ದಲ್ಲಿ ರಿಪೇರಿಯಾಗದೆ ಅನೇಕ ಹಾಗೆಯೇ ಇವೆ. ಕೆಲವನ್ನು ಸ್ಕ್ರ್ಯಾಪ್ (scrap) ಆಗಿ ಇಡಬೇಕಾಗಿದೆ. ಒಟ್ಟು ಮೆಷಿನರಿ 10 ಕೋಟಿ ರೂಪಾಯಿ ಬೆಲೆಬಾಳುವಷ್ಟಿದೆ. ಆದಕಾರಣ ಸೆಂಟ್ರಲ್ ಮೆಕ್ಯಾನಿಕಲ್ ವರ್ಕ್‌ಷಾಪ್ ಮಾಡಬೇಕೆಂದಿದೆ. ಅಲ್ಲದೆ ಅಲ್ಲಲ್ಲಿ ರೀಜನಲ್ ಯೂನಿಟ್‌ಗಳನ್ನು ಮಾಡಿ ನಮ್ಮಲ್ಲಿ ನುರಿತ ಮೆಕ್ಯಾನಿಕ್‌ಗಳನ್ನು ಅಲ್ಲಿಗೆ ಹಾಕಿ ರಿಪೇರಿ ಮಾಡಬೇಕೆಂದು ಯೋಚನೆ ಮಾಡಿದ್ದೇವೆ, ಈ ಯೋಜನೆ ಕೊನೆಯ ಹಂತದಲ್ಲಿದೆ.

ಶ್ರೀ ಸಂಜೀವನಾಥ ಐಕಳ (ಸೂರತ್ಕಲ್).—ಸುದರ್ಶನದಲ್ಲಿ ನಿಮ್ಮ ಯಂತ್ರಗಳು ಕೆಲವು ಮಣ್ಣು ತಿನ್ನುತ್ತಿವೆ.

ಶ್ರೀ ವೀರೇಂದ್ರ ಪಾಟೀಲ್.—ಅದು ನನಗೆ ಗೊತ್ತಿದೆ, ಅದಕ್ಕೇ ಹೇಳುತ್ತಿದ್ದೇನೆ. ನಾನು ಹೇಳಿದಂತೆ ಆ ಯೂನಿಟ್ ಆದಮೇಲೆ ಇದೆಲ್ಲ ಸರಿಯಾಗುತ್ತದೆ.

ಇನ್ನೊಂದು ಮಾತು ಸ್ಟೋರ್ಸ್ ಚೆಕ್ಕಿಂಗ್ ವಿಷಯವನ್ನು ಹೇಳಿದರು. ಇದು ಸರಕಾರದ ಗಮ ನಕ್ಕೆ ಬಂದ ಕೂಡಲೇ ಕ್ರಮ ತೆಗೆದುಕೊಂಡು ಒಂದು ಸರ್ಕ್ಯುಲರ್ ಕಳುಹಿಸಿ, ಅಸಿಸ್ಟೆಂಟ್ ಇಂಜಿನಿ ಯರು ಮತ್ತು ಎಗ್ಸಿಕ್ಯೂಟಿವ್ ಇಂಜಿನಿಯರ್ ಚೆಕ್ ಮಾಡಬೇಕೆಂದು ತಿಳಿಸಿದ್ದೇವೆ, ಇದುವರೆಗೆ ಸ್ಟೋರ್ಸನ್ನು ಒಬ್ಬರು ಸೆಕೆಂಡ್ ಡಿವಿಜನ್‌ಕ್ಲಾರ್ಕು ನೋಡುತ್ತಿದ್ದರು ಮತ್ತು ಎಗ್ಸಿಕ್ಯೂಟಿವ್ ಇಂಜಿ ನಿಯರು ಆರು ತಿಂಗಳಿಗೊಮ್ಮೆ ಚೆಕ್ ಮಾಡುತ್ತಿದ್ದರು. ಈಗ ಡಬ್ಬಲ್‌ಲಾಕ್ ಪದ್ಧತಿಯನ್ನು ಮಾಡಿ ದ್ದೇವೆ. ಐದು ಲಕ್ಷಕ್ಕೆ ಮೇಲ್ಪಟ್ಟ ಸ್ಟೋರ್ಸ್ ಇದ್ದರೆ ಎಗ್ಸಿಕ್ಯೂಟಿವ್ ಇಂಜಿನಿಯರಿಗೆ ಪರ್ಸನಲ್ ಅಸಿ ಸ್ಟೆಂಟನ್ನು ಕೊಟ್ಟಿದ್ದೇವೆ. ಸ್ಟೋರ್ ಕೀಪರ್, ಸೂಪರಿಂಟೆಂಡೆಂಟ್, ಮ್ಯಾನೇಜರ್ ಮಾಡಬೇಕೆಂದಿದೆ. ಈಗ ಮಾಡಿರುವ ಡಬ್ಬಲ್ ಲಾಕ್ ಪದ್ಧತಿಯಿಂದ ಮುಂದೆ ಇಂತಹ ದೂರುಗಳು ಬರುವುದಿಲ್ಲವೆಂದು ಮಾಡಿದ್ದೇವೆ.

ರೂರಲ್ ಕಮ್ಯೂನಿಕೇಷನ್ ರೋಡ್ಸ್ ವಿಚಾರ ಬಂತು. ಇದೊಂದು ಸಮಸ್ಯೆಯಾಗಿದೆ. ಮೂರ ನೆಯ ಯೋಜನೆಯಲ್ಲಿ ಇದಕ್ಕೆ 9 ಕೋಟಿ ರೂಪಾಯಿ ಇದ್ದುದು ಮೂರು ವರ್ಷದಲ್ಲಿ ಹನ್ನೊಂದುವರೆ ಕೋಟಿ ರೂಪಾಯಿ ಖರ್ಚಾಗಿದೆ. ನಮ್ಮ ಮೇಲೆ ಕೃಪೆಮಾಡಿ ಒಂದು ಉಪಕಾರಮಾಡಿದ್ದಾರೆ, ಅದೇನೆಂದರೆ ಯಾವ ಯಾವ ಕೆಲಸ ಪ್ರಾರಂಭ ಮಾಡಿದ್ದೇವೆಯೋ ಅವನ್ನು ಮುಗಿಸುವುದಕ್ಕೆ ಬೇಕಾದ ಹಣವನ್ನೊದಗಿಸಿದ್ದಾರೆ. ಆದರೂ ಸಾಲುವುದಿಲ್ಲ. ಹೋದ ವರ್ಷ 135 ಲಕ್ಷ ಕೊಟ್ಟರು, ಮತ್ತೆ ಸಪ್ಲಿ ಮೆಂಟರಿ ಗ್ರ್ಯಾಂಟಾಗಿ 125 ಲಕ್ಷ ಕೇಳಿದ್ದೇವೆ. ಈ ಸಾರಿ 175 ಲಕ್ಷವನ್ನು ಒದಗಿಸಿದ್ದಾರೆ. ನನ್ನ ಪರಿಸ್ಥಿತಿಯೇನಾಗಿದೆಯೆಂದರೆ, ಜನರ ಬೇಡಿಕೆ ಹೆಚ್ಚಾಗಿದೆ ಎಲ್ಲರೂ ಅವರವರ ಪ್ರದೇಶ ದಲ್ಲಿ ಒಂದು ರಸ್ತೆ ಬೇಕೆಂದು ಕೇಳುತ್ತಾರೆ; ಒಂದು ಸೇತುವೆ ಬೇಕೆಂದು ಕೇಳುತ್ತಾರೆ. ಆದರೆ ಅದೆಲ್ಲವನ್ನೂ ಮಾಡಿಸುವುದಕ್ಕೆ ಪಬ್ಲಿಕ್ ವರ್ಕ್ಸ್ ಮಂತ್ರಿಗೆ ಶಕ್ತಿಯಿಲ್ಲ; ಪ್ಲ್ಯಾನಿಂಗ್ ಕಮಿಷನ್ ನವರು 9 ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ ಇನ್ನು ನಮ್ಮನ್ನು ಕೇಳಬಾರದು ಎಂದು ಹೇಳು ತ್ತಾರೆ. ಬೇರೆ ಬಾಬುಗಳಿಂದ ಸರೆಂಡರ್ ಮಾಡಿದರೆ ನಮಗೆ ಹಣ ಬರಬಹುದು. ಆದರೆ ಎಲ್ಲ ಇಲಾಖೆಗಳವರೂ ಇನ್ನೂ ಹೆಚ್ಚು ಹಣವನ್ನು ಬೇಡುತ್ತಾರೆ. ಒದಗಿಸಿದ್ದ 9 ಕೋಟಿ ರೂಪಾಯಿ ಮುಗಿದ ಮೇಲೆ ಎರಡೂವರೆ ಕೋಟಿ ರೂಪಾಯಿ ಹೆಚ್ಚು ಮಾಡಿದರು. ಹಣಕಾಸಿನ ಇಲಾಖೆ ಇನ್ನೇನು ಮಾಡುತ್ತಾರೆ? ಈ ಸಂದರ್ಭದಲ್ಲಿ ರೂರಲ್ ಕಮ್ಯೂನಿಕೇಷನ್ಸ್ ಕಾರ್ಯಕ್ರಮ ವನು

ಮಾಡುವುದಕ್ಕೆ ಮುಂಚೆ ಎಷ್ಟು ಗಮನ ಕೊಡಬೇಕಾಗಿತ್ತೊ, ಅಷ್ಟು ಕೊಡಲಿಲ್ಲವೆಂಬುದನ್ನು ಒಪ್ಪುತ್ತೇನೆ.

ಶ್ರೀ ಎಸ್. ಶಿವಪ್ಪ.—ಆಗ ಚುನಾವಣೆಯಿತ್ತು ಆದುದರಿಂದ ಗಮನ ಕೊಡಲಿಲ್ಲ.

ಶ್ರೀ ವೀರೇಂದ್ರ ಪಾಟೀಲ್.—ಆಗ ಚುನಾವಣೆ ಇರಲಿಲ್ಲ. ಹಾಗಿದ್ದಿದ್ದರೆ ಗುಬ್ಬಿ ತಾಲ್ಲೂಕಿಗೆ 430 ಮೈಲಿ ರಸ್ತೆ ಮಾಡುತ್ತಿರಲಿಲ್ಲ. ಇನ್ನೂ ಹತ್ತು ಹದಿಮೂರು ಸಾವಿರ ಮೈಲಿಯನ್ನು ತೆಗೆದುಕೊಂಡು ಪೂರ್ತಿ ಮಾಡಬೇಕಾದರೆ ಇನ್ನೂ ಒಂಭತ್ತು ಕೋಟಿ ರೂಪಾಯಿ ಬೇಕಾಗುತ್ತದೆ. ಈಗಾಗಲೇ ಐದು ಕೋಟಿ ರೂಪಾಯಿ ಖರ್ಚಾಗಿದೆ, ಇವು ಮಣ್ಣು ರಸ್ತೆಗಳು. ಒಂದು ಮೈಲಿಗೆ ಹತ್ತು ಸಾವಿರ ರೂಪಾಯಿ ಎಂದರೆ ಹತ್ತು ಕೋಟಿ ರೂಪಾಯಿ ಆಗುತ್ತದೆ. ಈಹೊತ್ತು ಎಂಟೂವರೆ ಒಂಬತ್ತು ಸಾವಿರ ಮೈಲಿ ತೆಗೆದುಕೊಂಡಿದ್ದೇವೆ. ನಮ್ಮ ಮನಸ್ಸಿಗೆ ಬಂದುದನ್ನು ತೆಗೆದುಕೊಂಡಿದ್ದೇವೆಂದು ಕೆಲವರು ಹೇಳಿದರು. ಈ ಸಭೆಯ 208 ಜನ ಸದಸ್ಯರು ಮತ್ತು ಮೇಲ್ಮನೆಯ 63 ಜನರನ್ನು ತೃಪ್ತಿ ಮಾಡಬೇಕಾದರೆ ಒಬ್ಬೊಬ್ಬರಿಗೆ ಐದು ಮೈಲಿ ಕೊಡಬಹುದು, ಇಷ್ಟು ಕೊಟ್ಟರೆ ತೆಗೆದುಕೊಳ್ಳುವುದಕ್ಕೆ ಸಿದ್ಧ ಎಂದು ಹೇಳಿದರೆ ಯಾವ ಪಕ್ಷ ಅಥವಾ ಪಾರ್ಟಿ ಪಂಗಡ ಎಂಬ ಯಾವ ಭೇದವೂ ಇಲ್ಲದೆ ತೆಗೆದುಕೊಂಡಿದ್ದೇನೆಂದು ಹೇಳುತ್ತೇನೆ. ಯಾವ ಅನ್ಯಾಯವೂ ಆಗಿಲ್ಲ. ಎಂಟೂವರೆ ಒಂಬತ್ತು ಸಾವಿರ ಮೈಲಿಗಳನ್ನು ಅಭಿವೃದ್ಧಿ ಮಾಡಬೇಕಾದರೆ ಇದಕ್ಕೆ 9 ಕೋಟಿ ರೂಪಾಯಿ ಬೇಕಾಗುತ್ತದೆ. ಈ ಪರಿಸ್ಥಿತಿಯಿದೆ.

ಪೋರ್ಟುಗಳ ಬಗ್ಗೆ ಹೇಳಿದ್ದಾರೆ. ಕರಾವಳಿ ಬಂದರುಗಳ ಬಗ್ಗೆ ಹೇಳಿದ್ದಾರೆ, ಅದನ್ನು ಒಪ್ಪುತ್ತೇನೆ. ಯಾವ ರೀತಿ ಯಾವ ವೇಗದಲ್ಲಿ ಅಭಿವೃದ್ಧಿಯಾಗಬೇಕೋ ಆ ವೇಗದಿಂದ ಆಗಿಲ್ಲ. ನಾವು ಒದಗಿಸಿರುವ ಹಣದಲ್ಲಿ ಬಹು ಭಾಗ ಪರದೇಶಗಳಿಂದ ಟಗ್ಸ್, ಡ್ರೆಡ್ಜರ್ಸ್, ನ್ಯಾವಿಗೇಷನಲ್ ಏಡ್ಸ್, ಟ್ರಕ್ಸ್, ಆಪ್ಟಿಕಲ್ ಎಕ್ವಿಪ್‌ಮೆಂಟ್ ಇವುಗಳಿಗೆ ವಿನಿಯೋಗವಾಗಬೇಕಾಗಿದೆ. ಪೋರ್ಟ್‌ಗಳ ಸಂಬಂಧವಾಗಿ ನಮಗೆ ಬರುವ ಕಷ್ಟ ಫಾರೆನ್ ಎಕ್ಸ್‌ಚೇಂಜ್, ಎಂದರೆ ವಿದೇಶಿ ವಿನಿಮಯದ ಕಷ್ಟ. ಇದು ನಮಗೆ ಸಾಕಷ್ಟು ಸಿಕ್ಕುತ್ತಿಲ್ಲ. ಎರಡು ಟನ್ನಿನ ಡ್ರೆಡ್ಜರ್ ಎರಡನೆಯ ಯೋಜನೆಯಲ್ಲಿ ಬೇಕಾಗಿತ್ತು, ಅದಕ್ಕೆ ಮೂರನೆಯ ಯೋಜನೆಯಲ್ಲಿ 7 ಲಕ್ಷ ರೂಪಾಯಿ ಸಿಕ್ಕಿದೆ. ಇನ್ನು ಲ್ಯಾಂಡ್ ಅಕ್ವಿಜಿಷನ್ ಸಂಬಂಧವಾದ ಕಷ್ಟವಿದೆ. ಸಕಾಲದಲ್ಲಿ ನಮಗೆ ಅಗತ್ಯವಾದ ಭೂಮಿ ಸಿಕ್ಕುತ್ತಿಲ್ಲ. ಫಲವತ್ತಾದ ಭೂಮಿಯಾದುದರಿಂದ ಅದನ್ನು ಜನರು ಕೊಡುತ್ತಿಲ್ಲ. ಇನ್ನು ಕಂಟ್ರಾಕ್ಟರ ವಿಚಾರದಲ್ಲಿಯೂ ಕಷ್ಟವಿದೆ. ಮೆರೈನ್ ಇಂಜಿನಿಯರಿಂಗ್ ಗೊತ್ತಿರುವ ಕಂಟ್ರಾಕ್ಟರುಗಳು ಬರಬೇಕು. ನಮ್ಮ ಹತ್ತಿರ ಅಂಥ ಕಂಟ್ರಾಕ್ಟರ್ ಇಲ್ಲ. ಈ ಕೆಲಸಕ್ಕೆ ಅವರು ಬರುವುದಿಲ್ಲ. ಇದಲ್ಲದೆ ಇನ್ನೊಂದು ಅಭಾವ ಇದೆ. ಸರಿಯಾದ ಇಂಜಿನಿಯರ್ಸ್ ಸಿಕ್ಕುತ್ತಾ ಇಲ್ಲ. ಆದುದರಿಂದ ನಮ್ಮ ಎಂಜಿನಿಯರುಗಳನ್ನು ಟ್ರೇನಿಂಗ್ ಸಲುವಾಗಿ ಹೊರಗಡೆ ಕಳಿಸಿಕೊಡುತ್ತಿದ್ದೇವೆ. ಈ ಕೆಲಸಕ್ಕೆ ಬೇಕಾಗುವ ಸಲಕರಣೆಗಳು ಬಂದಿವೆ. ಆದುದರಿಂದ ಇನ್ನುಮುಂದೆ ನಿಧಾನವಾಗಲಾರದು ಎಂದು ಸಮಾಧಾನಪಡತಕ್ಕ ಪರಿಸ್ಥಿತಿ ಉಂಟಾಗಿದೆ ಎಂದು ಹೇಳುತ್ತೇನೆ.

12-30 P.M.

ಇನ್ನು ಮಂಗಳೂರು ಪೋರ್ಟ್ ನಿರ್ಮಾಣವಾಗತಕ್ಕ ಪ್ರದೇಶದಲ್ಲಿಯ ಜನರನ್ನು ರೀಹ್ಯಾಬಿಲಿಟೇಶನ್ ಮಾಡುತ್ತಾ ಇಲ್ಲಾ ಎಂದು ಒಬ್ಬ ಮಾನ್ಯ ಸದಸ್ಯರು ಹೇಳಿದರು. ಅದು ಸರಿಯಲ್ಲ. ಸರಕಾರ ಬಹಳ ದೊಡ್ಡ ಮನಸ್ಸು ಮಾಡಿ ಈ ಕೆಲಸ ಮಾಡುತ್ತಿದೆ. ಈ ಮಂಗಳೂರು ಬಂದರು ನಿರ್ಮಾಣವಾಗಲಿರುವ ಪ್ರದೇಶದಲ್ಲಿ ಚಾಲಗೇಣಿ ಟೆನೆಂಟ್ಸ್ ಇದ್ದಾರೆ. ಕಾನೂನು ಪ್ರಕಾರ ಅವರನ್ನು ಹೊರಗೆ ಕಳಿಸಿ ಬೇರೆ ಕಡೆ ನೆಲೆಸುವುದಕ್ಕೆ ಅವರಿಗೆ ಪರಿಹಾರ ಕೊಡಲು ಏನೂ ಪ್ರೊವಿಜನ್ ಇಲ್ಲ. ಅಂಥವರನ್ನು ಬರೀ ಕೈಯಿಂದ ಹೊರಗೆ ಹಾಕುವುದು ಯಾವ ರೀತಿಯಿಂದಲೂ ಸರಿಯಲ್ಲ. ಆದುದರಿಂದ ಈ ವಿಷಯದಲ್ಲಿ ಸರಕಾರ ಯೋಚನೆ ಮಾಡಿ ಒಂದು ರೀತಿಯ ವ್ಯವಸ್ಥೆ ಮಾಡಿದೆ. ಅಲ್ಲಿರುವುದು ಬಹಳ ಒಳ್ಳೆಯ ಭೂಮಿಯಾಗಿದೆ. ಬಿಟ್ಟುಕೊಡುವುದಕ್ಕೆ ಯಾರೂ ತಯಾರಾಗಿಲ್ಲ. ಆದುದರಿಂದ ಈ ವೆಟ್ ಭೂಮಿಯಲ್ಲಿ ಕ್ಲಾಸಿಫಿಕೇಶನ್ ಮಾಡಿ ಮೂರು ರೇಟ್ ಪ್ರಕಾರದ ಎಕ್ಸ್‌ಗ್ರೇಶಿಯಾ ಪರಿಹಾರ ಕೊಡುವುದಕ್ಕೆ ಒಂದು ಸೂಕ್ತ ಏರ್ಪಾಡು ಮಾಡಲಾಗಿದೆ. ಒಂದನೇ ತರಗತಿಯ ವೆಟ್ ಲ್ಯಾಂಡ್ಸಿಗೆ ಒಂದು ಎಕರೆಗೆ 900 ರೂ. ಎಕ್ಸ್‌ಗ್ರೇಶಿಯಾ, ಎರಡನೇ ಕ್ಲಾಸ್ ಭೂಮಿಗೆ 600 ರೂ. ಮೂರನೇ ಕ್ಲಾಸ್ ಭೂಮಿಗೆ 300 ರೂಪಾಯಿಯಂತೆ ಪ್ರತಿಯೊಂದು ಎಕರೆಗೆ ಕೊಡಬೇಕೆಂಬ ನಿರ್ಣಯ ಮಾಡಲಾಗಿದೆ. ಇದಲ್ಲದೆ ತೆಂಗಿನ ಮರಗಳಿರುವ ಪ್ರದೇಶದಲ್ಲಿ ತೆಂಗಿನ ಮರದ ಯೀಲ್ಡ್ ನೋಡಿಕೊಂಡು ಒಂದು ಮರಕ್ಕೆ ಒಂದು ರೂಪಾಯಿ ಹಾಗೆ ಎಕ್ಸ್‌ಗ್ರೇಶಿಯಾ ಕೊಡಬೇಕೆಂದು ನಿರ್ಣಯ ಮಾಡಿದ್ದೇವೆ. ಈ ವಿಚಾರದಲ್ಲಿ ಸಲಹೆ ಪಡೆಯಲು ಶ್ರೀಮಾನ್ ಐಕಳ ಅವರನ್ನೂ,

(ಶ್ರೀ ವೀರೇಂದ್ರ ಪಾಟೀಲ್)

ಶ್ರೀಮಾನ್ ಕೃಷ್ಣಶೆಟ್ಟಿಯವರನ್ನೂ ಕರೆಸಿ ಅವರೊಡನೆ ವಿಚಾರವಿನಿಮಯ ಮಾಡಿ ಅವರ ಸಲಹೆ ತೆಗೆದುಕೊಂಡು ಅದೇ ಸ್ಥಾನದಲ್ಲಿಯೇ ಇದನ್ನು ನಿರ್ಣಯ ಮಾಡಿದ್ದೇವೆ. ಆದಕಾರಣ ಅವರಿಗೆ ಕಾಂಪೆನ್‌ಸೇಶನ್ ಸಿಕ್ಕುತ್ತದೆ. ಅವರು ಪುನಃ ಒಳ್ಳೇ ರೀತಿಯಿಂದ ನೆಲೆಸುವುದಕ್ಕೆ ಎರಡು ಮೂರು ಕಡೆ ಒಳ್ಳೇ ಪ್ರದೇಶದಲ್ಲಿ ಸೈಟುಗಳನ್ನು ಕೊಡಲಾಗಿದೆ. ಈ ಹೊಸ ಪ್ರದೇಶದಲ್ಲಿ ರಸ್ತೆ ರಚನೆ, ಕಮ್ಯುನಿಟಿ ಹಾಲ್ ನಿರ್ಮಾಣ ಮಾಡುವುದು, ಬಾವಿ ತೆಗೆಸುವುದು ಶಾಲಾ ಕಟ್ಟಡ ಕಟ್ಟಿಸುವುದು ಇವುಗಳನ್ನು ಮಾಡುತ್ತಾ ಇದ್ದೇವೆ. ಅವರಿಗೆ ಭೂಮಿ ಒದಗಿಸಿಕೊಡುವುದು ಬಹಳ ಕಷ್ಟವಾಗಿದೆ. ಇನ್ನೂ ಹೆಚ್ಚು ಭೂಮಿ ದೊರೆತರೆ ಕೊಡುತ್ತೇವೆ. ಈ ವಿಚಾರದಲ್ಲಿ ಸರಕಾರಕ್ಕೆ ಯಾವ ರೀತಿಯಿಂದಲೂ ಸಂಕುಚಿತ ಭಾವನೆ ಇಲ್ಲಾ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇಡೀ ಮೈಸೂರು ರಾಜ್ಯದಲ್ಲಿ ಕಾಂಪೆನ್‌ಸೇಶನ್ ಎಕ್ಸ್‌ಗ್ರೇಶಿಯಾ ಎಲ್ಲರಿಗಿಂತ ಹೆಚ್ಚಿಗೆ ಕೊಟ್ಟಿರುವುದು ಮಂಗಳೂರು ಪೋರ್ಟ್‌ನಿಂದ ಅಫೆಕ್ಟ್ ಆಗುವವರಿಗೆ ಕೊಟ್ಟಿದ್ದೇವೆಂದು ಧೈರ್ಯದಿಂದ ಹೇಳಲು ಬಯಸುತ್ತೇನೆ. ಅಲ್ಲಿಯ ಜನರಿಗೆ ಕೊಡುವುದಲ್ಲದೆ, ಭೂಮಿ ಮಾಲೀಕರಿಗೂ ಪರಿಹಾರ ಕೊಡಬೇಕಾಗುತ್ತದೆ. ಕೇಂದ್ರ ಸರಕಾರ ಕಾಂಪೆನ್‌ಸೇಶನ್ ಮಾತ್ರ ಕೊಡುತ್ತದೆ. ಅವರನ್ನು ಒಂದು ಕಡೆ ಸೆಟಲ್ ಮಾಡುವುದಕ್ಕೆ ಖರ್ಚು ಮಾಡತಕ್ಕದ್ದು ರಾಜ್ಯ ಸರಕಾರಕ್ಕೆ ಸಂಬಂಧಪಟ್ಟದ್ದು. ಆದುದರಿಂದ ರೀ-ಹ್ಯಾಬಿಲಿಟೇಷನ್ ಕಾಂಪೆನ್‌ಸೇಷನ್ ಏತಕ್ಕೆ ಕೊಡುತ್ತಿದ್ದೇವೆ ಎಂಬುದನ್ನು ತಾವು ವಿಚಾರ ಮಾಡಬೇಕು. ಇದಕ್ಕೂ ಹೆಚ್ಚು ಕೊಡುವುದು ಸಾಧ್ಯವಿಲ್ಲ. ಅವರು ಹಾಗೆಯೇ ಬರೀ ಕೈಯಿಂದ ಹೋಗುವುದು ಬೇಡ ನಿರುದ್ಯೋಗಿಗಳಾಗುವುದು ಬೇಡ ಬೇರೆ ಉದ್ಯೋಗ ಮಾಡುವುದಕ್ಕೆ ಕ್ಯಾಪಿಟಲ್ ಅವರ ಜೋಬಿನಲ್ಲಿ ಹಾಕಿ ಅವರಿಗೆ ಸಹಾಯ ಮಾಡುತ್ತಿದ್ದೇವೆ. ಇದು ಬಹಳ ಮುಖ್ಯವಾಗಿದೆ. ಈ ಮಂಗಳೂರು ಬಂದರು 40 ಅಡಿ ಆಳ ಹೋಗುವ ಪರಿಸ್ಥಿತಿ ಇದೆ. ಇದೊಂದು ಐಡಿಯಲ್ ಬಂದರು ಆಗುತ್ತದೆ ಎಂದು ನಾವು ತಿಳಿದುಕೊಂಡಿದ್ದೇವೆ. ಈ ಮಂಗಳೂರು ಬಂದರು ನಿರ್ಮಾಣ ಕಾರ್ಯದಲ್ಲಿ ಕೇಂದ್ರ ಸರಕಾರ ಸಹ ಹಣ ಖರ್ಚು ಮಾಡುತ್ತಿದೆ. ನಾವೂ ಅದಕ್ಕೆ ಸಹಾಯ ಮಾಡಬೇಕೆಂಬ ಉದ್ದೇಶದಿಂದ ಮುಂದುವರಿಯುತ್ತಿದ್ದೇವೆ. ಮುಂದಿನ ವರ್ಷ ಇದಕ್ಕೆ ಹೆಚ್ಚು ಹಣ ಒದಗಿಸಬಹುದು ಮತ್ತು ಕೇಳುವುದಕ್ಕೂ ಅನುಕೂಲವಾಗುತ್ತದೆ. ಈ ರೀತಿ ಕೆಲಸ ಕಾರ್ಯಗಳು ನಡೆಯುತ್ತಾ ಇವೆ. ಇದಲ್ಲದೆ ಇನ್ನೂ ಅನೇಕ ಅಭಿವೃದ್ಧಿ ಕಾರ್ಯಗಳು ನಡೆಯುತ್ತಾ ಇವೆ. ಈಗ ನನಗೆ ಮಾತನಾಡಲು ಕೊಟ್ಟಿರುವ ಸಮಯ ಆಗಿಹೋಗಿದೆ, ಕಾಲಾವಕಾಶ ಇಲ್ಲ. ಈ ಸಂದರ್ಭದಲ್ಲಿ ಇಷ್ಟೇ ಹೇಳುತ್ತೇನೆ. ಇದುವರೆಗೆ ಸುಮಾರು ಒಂದೂವರೆ ಗಂಟೆಯವರೆಗೆ ಪಿ. ಡಬ್ಲ್ಯು. ಡಿ. ಇಲಾಖೆಯ ಬೇಡಿಕೆ ಮೇಲೆ ನಡೆದ ಚರ್ಚೆಗೆ ವಿಹಂಗಮ ನೋಟದಿಂದ ಉತ್ತರ ಕೊಡಲು ಮಾನ್ಯ ಅಧ್ಯಕ್ಷರು ನನಗೆ ಅವಕಾಶ ಕೊಟ್ಟಿದ್ದಕ್ಕೆ ಅವರಿಗೆ ಧನ್ಯವಾದಗಳನ್ನು ಅರ್ಪಿಸಿ, ಈ ಡಿಮ್ಯಾಂಡಿಗೆ ಈ ಮಾನ್ಯ ಸಭೆಯ ಎಲ್ಲ ಸದಸ್ಯರೂ ಸರ್ವಾನುಮತದಿಂದ ಒಪ್ಪಿಗೆ ಕೊಡಬೇಕೆಂದು ತಮ್ಮಲ್ಲಿ ಕೂಡ ವಿನಂತಿ ಮಾಡಿಕೊಳ್ಳುತ್ತೇನೆ.

Mr. SPEAKER.—I will put it now to the vote of the House. The question is :

"That the respective sums in respect of the demands the list of which has been circulated to the Members, be granted to Government, to defray the charge which will come in course of payment during the financial year for the period ending 31st March 1965 in respect of Demands No. 31, 32, 43, 48 and 50".

The motion was adpoted.

[*As directed by the Chair the motion for Demands for Grants which were adopted by the House, are reproduced below:*

DEMAND NO. 31.—PUBLIC WORKS.

50. *Public Works.*

"That a sum not exceeding Rs. 21,36,77,000 be granted to the Government to defray the charges which will come in course

of payment during the financial year for the period ending 31st day of March 1965, in respect of ' Public Works '. "

DEMAND NO. 32.—PORTS AND PILOTAGE.

53. *Ports and Pilotage.*

" That a sum not exceeding Rs. 8,53,000 be granted to the Government to defray the charges which will come in course of payment during the financial year for the period ending 31st day of March 1965, in respect of ' Ports and Pilotage '. "

DEMAND NO. 43.—CAPITAL OUTLAY ON IMPROVEMENT OF PUBLIC HEALTH.

94. *Capital Outlay on Improvement of Public Health.*

" That a sum not exceeding Rs. 1,66,90,000 be granted to the Government to defray the charges which will come in course of payment during the financial year for the period ending 31st day of March 1965, in respect of ' Capital Outlay on Improvement of Public Health '. "

DEMAND NO. 48—CAPITAL OUTLAY ON PUBLIO WORKS.

103. *Capital Outly on Public Works.*

" That a sum not exceeding Rs. 5,80,55,000 be granted to the Government to defray the charges which will come in course of payment during the financial year for the period ending 31st day of March 1965, in respect of ' Capital Outlay on Public Works '. "

DEMAND NO. 50.—DEVELOPMENT OF MINOR PORTS.

110. *Capital Outlay on Ports.*

" That a sum not exceeding Rs. 36,30.0[illegible]0 be granted to the Government to defray the charges which will come in course of payment during the financial year for the period ending 31st day of March 1965, in respect of ' Capital Outlay on Ports '. "

Mr. SPEAKER.—The House will now adjourn to meet again at 3-30 P.M.

The House adjourned for recess and re-assembled at Thirty Minutes past Three of the Clock.